

ಶ್ರೀ ಮಾಳಿಂಗರಾಯ ಪ್ರಸನ್ನ

ವಿಶ್ವಪಥ-ಹಾಲುಮತ ಸಂಸ್ಕೃತಿ - ೪

ಮಾಳಿಂಗರಾಯ

ಶ್ರೀ, ಮಾಳಿಂಗರಾಯ.

ಲೇಖಕರು

ಡಾ. ಶಿವಾಜಿ ಕಾಂಬಳೆ

ಸಂಪಾದಕರು

ಡಾ. ಮಲ್ಲಿಕಾ ಘಂಟಿ

ಪ್ರಕಾಶಕರು

ಶ್ರೀ ಕಾಗಿನೆಲೆ ಮಹಾಸಂಸ್ಥಾನ ಕನಕ ಗುರುಪೀಠ

ಗುಲ್ಬರ್ಗ ವಿಭಾಗ, ವೀರಗೋಟ (ತಿಂಥಿಣಿ ಬ್ರಿಜ್),

ದೇವದುರ್ಗ ತಾ. ರಾಯಚೂರು ಜಿ.

ಮಾಳಿಂಗರಾಯ

ಜನರ ಸಮೂಹವೇ ಜನಪದ, ಅವರಿಂದ ರಚನೆಗೊಂಡದ್ದು ಜನಪದ ಸಾಹಿತ್ಯ. ತಮ್ಮ ಬದುಕಿನ ಅನುಭವಗಳನ್ನು ಹಲವು ರೂಪಗಳಲ್ಲಿ ಹೇಳುತ್ತ ಬಂದಿದ್ದಾರೆ. ಇವು ನಮ್ಮ ಪ್ರಾಚೀನ ಸಂಸ್ಕೃತಿಯನ್ನು ತಿಳಿಸುವ ಪ್ರಮುಖ ಸಾಧನೆಗಳು. ಇಂಥ ಸಾಹಿತ್ಯವನ್ನು ರಚಿಸಿದವರು ಬಹುಪಾಲುಜನ ಅನಕ್ಷರಸ್ಥರಾದ್ದರಿಂದ ಇದಕ್ಕೆ ಮೌಖಿಕ ಸಾಹಿತ್ಯ ಎನ್ನುತ್ತಾರೆ.

ದ್ರೌಪದಿ ವಸ್ತ್ರಾಪಹರಣ, ವೀರ ಅಭಿಮನ್ಯು, ಬಬ್ರುವಾಹನ ಕಾಳಗ, ಕೀಚಕ ವಧೆಯಂತಹ ಪೌರಾಣಿಕ ವಸ್ತುವನ್ನು ಆಧರಿಸಿದ ಬಯಲಾಟಗಳು ಜನಪದರಲ್ಲಿ ಇವು ವೀರಮೌಲ್ಯವನ್ನು ಪ್ರತಿಪಾದಿಸದೆ, ಅವರ ಜೀವನದ ಒಂದು ಭಾಗವಾಗಿ ನಿಲ್ಲುತ್ತವೆ. ಅಷ್ಟೇ ಅಲ್ಲ, ಇವುಗಳೇ ಕಥೆ, ಕಾವ್ಯ, ಪುರಾಣ ಮತ್ತು ಐತಿಹ್ಯದಂತಹ ಜನಪದ ಚರಿತ್ರೆಯ ನಿರ್ಮಾಣಕ್ಕೆ ಕಾರಣವಾಗಿವೆ. ಇಂಥ ಪುರಾಣ, ಐತಿಹ್ಯಗಳು ಸ್ಥಳೀಯ ಸಾಂಸ್ಕೃತಿಕ ವೀರರನ್ನು ಗುರುತಿಸುವಲ್ಲಿ ಪ್ರಮುಖ ಪಾತ್ರವಹಿಸಿವೆ.

ಸ್ಥಳೀಯ ಜನರ ಉಸಿರಿನೊಂದಿಗೆ ಬೆರೆತುಹೋದ ಜನಪದ ನಾಯಕ ಅಥವಾ ಸಾಂಸ್ಕೃತಿಕ ವೀರರು ಒಂದು ಕಾಲದಲ್ಲಿ ಜನಸಾಮಾನ್ಯರಾಗಿ ಬದುಕಿ ಮುದಾಯದ ಏಳಿಗೆಗಾಗಿ ದುಡಿದವರು. ಇತರರಿಂದ ತಮ್ಮ ಮೇಲಾಗುವ ಅನ್ಯಾಯ ಅತ್ಯಾಚಾರದ ವಿರುದ್ಧ ಪ್ರತಿಭಟಿಸಿದವರು. ಕೆಟ್ಟ ದಾರಿ ಹಿಡಿದವರಿಗೆ ಒಳ್ಳೆಯ ದಾರಿ ತೋರಿಸಿದವರು. ಕಷ್ಟದಲ್ಲಿದ್ದವರಿಗೆ ಸಹಾಯ ಮಾಡಿದವರು.

ಒಟ್ಟಿನಲ್ಲಿ ತಮ್ಮ ಒಳ್ಳೆಯ ನಡೆ ನುಡಿಗಳ ಮೂಲಕ ಇತರರಿಗೆ ಆದರ್ಶವಾಗಿ ನಿಂತಿದ್ದಾರೆ. ಅಷ್ಟೇ ಅಲ್ಲ, ಜನ ಅವರನ್ನು ದೇವರೆಂದೂ, ಬೇಡಿದನ್ನು ಕೊಡುವವನೆಂದೂ ದೈವವನ್ನು ಪೂಜಿಸುತ್ತಾರೆ. ತಮ್ಮ ದೈವವನ್ನು ಅದರ ವ್ಯಕ್ತಿತ್ವವನ್ನು ಇನ್ನಷ್ಟು ಹೆಚ್ಚಿಸಲು ಪೌರಾಣಿಕ ಸಂಗತಿಗಳನ್ನು ಹುಟ್ಟುಹಾಕುತ್ತಾರೆ ಮತ್ತು ಬದುಕಿನೊಂದಿಗೆ ಆ ನಾಯಕರ ಸಂಬಂಧವನ್ನು ಬೆಸೆದುಕೊಳ್ಳುತ್ತಾರೆ.

ಜನಪದರಲ್ಲಿ ಬರುವ ಕಥನ ಕಾವ್ಯಗಳು ಜನಮನವನ್ನು ಗೆದ್ದ ಸ್ಥಳೀಯ ಸಾಂಸ್ಕೃತಿಕ ವೀರರನ್ನು ಕುರಿತು ರಚನೆಗೊಂಡಿವೆ. ಕನ್ನಡ ಜನಪದ ಸಾಹಿತ್ಯ ಸಂದರ್ಭದಲ್ಲಿ ಹಲವು ಜನ ಸಾಂಸ್ಕೃತಿಕ ವೀರರನ್ನು ಕುರಿತು ಕಥನ ಕಾವ್ಯಗಳು ಸಿಗುತ್ತವೆ. ಅವುಗಳಲ್ಲಿ ಪ್ರಮುಖವಾಗಿ ಗುರುತಿಸುವುದಾದರೆ-ಮಲೆಮಹದೇಶ್ವರ ಕಾವ್ಯ, ಸೇವಾಲಾಲನ ಶಾಸ್ತ್ರಿ ಮತ್ತು ಮಾಳಿಗಂಗನ ಕಾವ್ಯ ಹೆಸರಿಸುವಂಥವು. ಈ ಕಥನಕಾವ್ಯಗಳ ನಾಯಕರು ಕೆಳವರ್ಗದಿಂದಲೇ ಬಂದವರು. ಇವರೆಲ್ಲ ಶೋಷಣೆಯ ವಿರುದ್ಧ ಸೆಡ್ಡುಹೊಡೆದು ನಿಂತವರು. ಹಲವಾರು ಪವಾಡಗಳನ್ನು ಮೆರೆದು, ಎಲ್ಲರಿಂದ ಸೈ ಎನಿಸಿಕೊಂಡು ದೈವವಾಗಿ ಪೂಜೆಗೊಳ್ಳುತ್ತಿರುವವರು. ಅದರಲ್ಲಿ ಮಾಳಿಂಗರಾಯನು ಒಬ್ಬನು.

೧

ಕುರುಬ ಸಮುದಾಯದ ಪ್ರಮುಖ ದೈವ ಮತ್ತು ಸಾಂಸ್ಕೃತಿಕ ನಾಯಕ ಮಾಳಿಂಗರಾಯ. ಕುರಿ ಸಾಕಾಣಿಕೆಯೇ ಮುಖ್ಯ ವೃತ್ತಿಯಾಗಿಸಿಕೊಂಡ ಈ ಸಮುದಾಯವು ಸಾಮಾನ್ಯವಾಗಿ ಮುಗ್ಧರು ಮತ್ತು ಸ್ನೇಹ ಜೀವಿಗಳು. ಇವರು ಚಿಂಚಲಿ ಮಾಯವ್ವ, ಬೀರಪ್ಪ, ಮೈಲಾರ, ಸಿದ್ಧೇಶ್ವರ, ಮಾಳಿಂಗರಾಯ ಮುಂತಾದ ದೇವ ದೇವತೆಗಳನ್ನು ಪೂಜಿಸುತ್ತಾರೆ. ಇಂಥ ಜನಾಂಗದಲ್ಲಿ ಜನಿಸಿದವನು ಮಾಳಿಂಗರಾಯ.

ಬೀರಪ್ಪ, ಸಿದ್ಧಪ್ಪನಂತೆ ಮಾಳಿಂಗರಾಯನು ಸಹ ಪವಾಡ ಪುರುಷ. ಬಸವಣ್ಣನ ಏಳನೇ ಅವತಾರವೆಂದು ಹೇಳಲಾಗುತ್ತದೆ. ಈತನ ಗುರು ಬೀರಪ್ಪ.

ಬೀರಪ್ಪ ಉಗ್ರ ರೂಪದವನು. ಈತ ಶಿವನ ಬೆವರಿನಿಂದ ಜನಿಸಿದ್ದಾನೆ ಎಂದು ಹೇಳಲಾಗುತ್ತದೆ. ಈತನನ್ನು ಮಾಯಕಾರ, ಕರಿಯದೇವರು, ಬೀರಲಿಂಗ, ಲಿಂಗಬೀರಣ್ಣ, ಚನ್ನಿಂಗ ಬೀರಣ್ಣ, ಮಾಯಕಾರರ ಮಿಂಡ-ಇಂಥ ವಿಶೇಷಣಗಳಿಂದ ಕರೆಯುತ್ತಾರೆ.

ಪಶುಪಾಲನೆಯಂಥ ಕೆಲಸ ಮಾಡುವ ಈ ಜನರ ಇನ್ನೊಂದು ಮುಖ್ಯ ಸಂಗತಿ ಎಂದರೆ ಭಕ್ತಿ. ದೇವರು-ಪೂಜಾರಿ-ಭಕ್ತಿ-ಎಂಬ ಮೂರು ತತ್ವಗಳು ಕಂಡುಬರುತ್ತವೆ. ಇಲ್ಲಿ ಗುರು ದೇವರಾಗಿ, ಶಿಷ್ಯ-ಪೂಜಾರಿಯಾಗಿ, ನಿಷ್ಠೆಯುಳ್ಳ ಭಕ್ತನಾಗಿ ಕಂಡುಬರುತ್ತಾನೆ. ಗುರುದೇವರು ಎಂದರೆ ಬೀರಪ್ಪ, ಶಿಷ್ಯ-ಪೂಜಾರಿಯಾದವನು ಮಾಳಿಂಗರಾಯ. ಹೀಗಾಗಿ ಮಾಳಿಂಗರಾಯನ ಹುಟ್ಟಿಗೆ ಬೀರಪ್ಪ ಕಾರಣನಾಗುತ್ತಾನೆ. ದೇವರು ಮತ್ತು ಪೂಜಾರಿಯ ನಡುವೆ ಇರುವ ಭಕ್ತಿಯನ್ನು ಅರಿಯಲು ಬೀರಪ್ಪ ಮತ್ತು ಮಾಳಿಂಗರಾಯರೇ ಒಳ್ಳೆಯ ಉದಾಹರಣೆ.

ಬೀರಪ್ಪ ಶಿವನಂತೆ ಕಂಡರೆ ಬೀರಪ್ಪನು ಪೂಜಾರಿಯ ರೂಪದಲ್ಲಿ ಮಾಳಿಂಗರಾಯ ಕಾಣುತ್ತಾನೆ. ಬೀರಪ್ಪ ತನಗೊಬ್ಬ ಶಿಷ್ಯಬೇಕೆಂದು ನೇರವಾಗಿ ಶಿವನಿಂದಲೇ ಪಡೆಯುತ್ತಾನೆ. ಕ್ರೋಧಗೊಳ್ಳುವ ಸ್ವಭಾವ ಬೀರಪ್ಪನದು. ತನಗೆ ಬೇಕಾದವರನ್ನು ಕಾಡಿ-ಬೇಡಿ ಅವರ ಮನ ಪರೀಕ್ಷಿಸುತ್ತಿದ್ದನು. ಇಲ್ಲಿ ತನ್ನ ಶಿಷ್ಯನಾದ ಮಾಳಿಂಗರಾಯನನ್ನು ಸಹ ಹಲವಾರು ರೀತಿಯ ಪರೀಕ್ಷೆಗಳನ್ನು ಒಡ್ಡಿ ಪೂಜೆಗೊಳ್ಳುತ್ತಾನೆ. ಆಟಕ್ಕೆ ಹುಲಿಮರಿಬೇಕೆಂದು. ಊಟ ಮಾಡಲು ಹುಲಿಯ ಗಿಣ್ಣು ಬೇಕೆಂದು, ಅಷ್ಟೇ ಅಲ್ಲ, ಮಾಳಿಂಗರಾಯ ಹೋಗುವ ದಾರಿಯಲ್ಲಿ ಹಾವು ಚೇಳು ಹಾಕಿ ನೋಡುತ್ತಾನೆ. ಗುಡುಗು ಸಿಡಿಲು ಸಹಿತ ಭಾರೀಮಳೆಯನ್ನು ಸುರಿಸುತ್ತಾನೆ. ಇದಕ್ಕೆಲ್ಲ ತಗ್ಗದೆ-ಬಗ್ಗದೆ ಸಮರ್ಥವಾಗಿ ಎದುರಿಸಿದ ಮಾಳಿಂಗರಾಯನನ್ನು ಶಿಷ್ಯನಾಗಿ ಸ್ವೀಕರಿಸುತ್ತಾನೆ. ಇವರಿಬ್ಬರ ಮಧ್ಯೆ ಎಂಥ ಅನ್ಯೋನ್ಯ ಭಕ್ತಿ ಇತ್ತು ಎಂಬುದಕ್ಕೆ ಇದೊಂದು ಘಟನೆ ಪ್ರಮುಖ ಸಾಕ್ಷಿಯಾಗುತ್ತದೆ.

ಒಬ್ಬ ಭಕ್ತನು ಬೀರಪ್ಪನಿಗಾಗಿ ಬಾನದ ಬುತ್ತಿ ತರುತ್ತಾನೆ. ಅದೇ ದಾರಿಯಲ್ಲಿ ಬರುತ್ತಿದ್ದ ಮಾಳಿಂಗರಾಯ ನನಗೆ ಹಸಿವಾಗಿದೆ ಈ ಬುತ್ತಿ ಕೊಡು ಎಂದು ಆ ಭಕ್ತನಲ್ಲಿ ಬೇಡಿಕೊಳ್ಳುತ್ತಾನೆ. ಇದನ್ನು ದೇವರಿಗಾಗಿ ತೆಗೆದುಕೊಂಡು ಹೋಗುತ್ತಿದ್ದೇನೆ. ಹೀಗಾಗಿ ಕೊಡಲು ಸಾಧ್ಯವಿಲ್ಲವೆಂದು ನುಡಿಯುತ್ತಾನೆ. ಮುಂದೆ ನೈವೇದ್ಯದ ತುಂಬ ಹುಳುಗಳೇ ಕಾಣುತ್ತವೆ. ಬೀರಪ್ಪ ದಾರಿ ಮಧ್ಯೆ ಯಾರಾದರೂ ಬುತ್ತಿ ಕೇಳಿದ್ದರೆ? ಎಂದು ಕೇಳಿದಾಗ ಹೌದೆಂದು ಭಕ್ತ ತಲೆ ಅಲ್ಲಾಡಿಸುತ್ತಾನೆ. ಅತ ಮಾಳಿಂಗರಾಯನೇ ಇರಬೇಕೆಂದು ಅರಿತ ಬೀರಪ್ಪ, ಮಾಳಿಂಗರಾಯನಿಗೆ ಸಲ್ಲದ ಬುತ್ತಿ ನನಗೆ ಬೇಡ ಎಂದು ನಿರಾಕರಿಸುತ್ತಾನೆ. ಇದುವರೆಗೂ ಹಬ್ಬ ಹರಿದಿನ, ಜಾತ್ರೆಯಂಥ ಸಂದರ್ಭದಲ್ಲಿ ಮೊದಲು ಮಾಳಿಂಗರಾಯನಿಗೆ ನೈವೇದ್ಯ ಸಲ್ಲಿಸಿದ ನಂತರವೇ ಬೀರಪ್ಪನಿಗೆ ಸಲ್ಲಿಸುವ ಸಂಪ್ರದಾಯ ಉಳಿದುಕೊಂಡು ಬಂದಿದೆ.

೨

ಮಾಳಿಂಗರಾಯ ಪಶುಪಾಲನೆಯನ್ನು ಅವಲಂಬಿಸಿದ ಅಲೆಮಾರಿಗಳ ನಾಯಕ. ಈತನ ಜೀವನದಲ್ಲಿ ಘಾಸಿಸುವ ಘಟನೆಗಳು ನೀರು ಮತ್ತು ಪಶುಗಳಿಗೆ ಸಂಬಂಧಿಸಿದಂತೆಯೇ ಆಗಿವೆ.

ಇಲ್ಲಿ ಮಾಳಿಂಗರಾಯನ ವಂಶ ಸಹ ದೈವೀಪ್ರೇರಣೆಯಿಂದಲೇ ಹುಟ್ಟಿ ಬೆಳೆದುಬರುತ್ತದೆ. ಆ ಕತೆ ಹೀಗಿದೆ :

ಒಂದು ಸಲ ಶಿವ-ಮತ್ತು ಪಾರ್ವತಿ ಸುತ್ತಾಡಲೆಂದು ಭೂಲೋಕಕ್ಕೆ ಬರುತ್ತಾರೆ. ಆದರೆ ಇಲ್ಲಿ ಕಾಡನ್ನು ಕಡಿದು ಸರ್ವನಾಶ ಮಾಡಿರುತ್ತಾರೆ. ರುದ್ರಭೂಮಿಯಂಥ ದೃಶ್ಯ ನೋಡಿ ಅವರ ಮನಸ್ಸಿಗೆ ತುಂಬಾ ನಿರಾಸೆಯಾಗುತ್ತದೆ. ಗಂಡನ ಅಪ್ಪಣೆ ಪಡೆದು ಅಲ್ಲಿ ಒಂದು ಮಾಯದ ವನ ನಿರ್ಮಾಣ ಮಾಡುತ್ತಾಳೆ ಈ ಸುಂದರವಾದ ಮಾಯದ ವನ ನೋಡಿ ಅವಳ ಮನಸ್ಸು ಚಂಚಲಗೊಂಡು

ಹುಚ್ಚು ಹಿಡಿದಂತಾಗಿ ಮೋಹ ಹೆಚ್ಚಾಗಿ ಮೇಲೆ ಹಾಲು ಸುರಿಯುತ್ತವೆ. ಈ ಕುರಿತು ಭೂದೇವಿಯೊಂದಿಗೆ ಚರ್ಚಿಸಿ. ಅವರ ಸಲಹೆ ಮೇರೆಗೆ ಮೂರು ಪ್ರಕಾರದ ಮಣ್ಣನ್ನು ತಂದು ಅದನ್ನು ಮೇಲೆ ಹಾಲಿನಲ್ಲಿ ಕಲೆಸಿ ಒಂದು ಹೆಣ್ಣು ಒಂದು ಗಂಡು, ಒಟ್ಟು ಎರಡು ಗೊಂಬೆಗಳನ್ನು ತಯಾರಿಸುತ್ತಾಳೆ. ಹೀಗೆ ತಯಾರಿಸಿದ ಗೊಂಬೆಗಳಿಗೆ ಪರಮೇಶ್ವರ ಜೀವ ತುಂಬುತ್ತಾನೆ. ಅವರಿಗೆ ಮುದ್ದವ್ವ ಮತ್ತು ಮುದಗೊಂಡ ಎಂದು ಹೆಸರಿಸುತ್ತಾರೆ. ಇವರಿಬ್ಬರು ಪಾರ್ವತಿ ಪರಮೇಶ್ವರರ ಮಾನಸಪುತ್ರರು. ಅಲ್ಲಿ ಹಾಲುಮತದ ಮೂಲ ಪುರುಷರು. ಇವರಿಂದಲೇ ಮಾಳಿಂಗರಾಯನ ವಂಶ ಬೆಳೆಯುತ್ತದೆ.

೩

ಮಾಳಿಂಗರಾಯನ ಮನೆತನದ ಮೂಲ ಗುರು ಸೋನಾರಿ ಸಿದ್ಧ. ಈ ಕುಟುಂಬದ ಏಳಿಗೆಯ ಹಿಂದೆ ಈತನಿದ್ದಾನೆ. ಈ ಸೋನಾರಿ ಸಿದ್ಧನನ್ನು ವಿಳುತಲೆ ಗುರು ಸೋನಾರಿ ಸಿದ್ಧ, ಕಾಲಭೈರವನಾಥ, ಗೌಡಬಂಗಾಲ ಜೋಗಿ ಎಂದು ಕರೆಯುತ್ತಾರೆ. ಇವರು ಮೂಲತಃ ಬಂಗಾಳ ಪ್ರದೇಶದಿಂದ ಮಹಾರಾಷ್ಟ್ರಕ್ಕೆ ಬಂದವರು. ಈ ಪಂಥಕ್ಕೆ ಗೋರಖನಾಥನೇ ಮೂಲಪುರುಷ. ಇವರು ಮಾಟ, ಮಂತ್ರ, ಮೋಡಿ, ಪವಾಡಗಳನ್ನು ಮಾಡಿ ಜನರನ್ನು ಆಕರ್ಷಿಸುತ್ತಾರೆ. ಜೊತೆಗೆ ಪಶುಸಂಪತ್ತನ್ನು ಹೆಚ್ಚಿಸಲು ಪ್ರೋತ್ಸಾಹಿಸುತ್ತಾರೆ. ಇವರ ತತ್ವ ಸಿದ್ಧಾಂತಕ್ಕೆ ಮಾರು ಹೋದ ಪಶುಪಾಲಕ ಸಮುದಾಯವು ಅವರನ್ನೇ ತಮ್ಮ ಮೂಲ ಗುರುವಾಗಿ ಸ್ವೀಕರಿಸುತ್ತಾರೆ.

ಈ ಸಿದ್ಧರು ಪಶುಸಂಪತ್ತಿನ ಉತ್ತೇಜಕರು ಮತ್ತು ಸ್ತ್ರೀ ಆರಾಧಕರು ಆಗಿದ್ದಾರೆ. ಪಶುಪಾಲನೆಯ ಕುಲಕ್ಕೆ ಮಾತೃಪ್ರಧಾನ ವ್ಯವಸ್ಥೆಯೇ ಹೆಚ್ಚು ಪ್ರಚಲಿತದಲ್ಲಿತ್ತು. ಇದುವರೆಗೂ ಸ್ತ್ರೀಪ್ರಧಾನ ದೇವತೆಗಳು ಪ್ರಬಲ ಶಕ್ತಿಯಾಗಿ ಕಂಡುಬರುತ್ತವೆ. ಪ್ರತಿ ಹಳ್ಳಿಗಳಲ್ಲಿ ಈಗಲೂ ಸ್ತ್ರೀ ದೇವಾಲಯಗಳು ಸಿಗುತ್ತವೆ.

ಸ್ತ್ರೀಯರಿಗೆ ಲೌಕಿಕ ಜ್ಞಾನ ಹೆಚ್ಚಾಗಿರುತ್ತದೆ. ಹೀಗಾಗಿ ಇವರು ವಿದ್ಯೆಗಿಂತ ಜೀವನಾನುಭವಕ್ಕೆ ಹೆಚ್ಚಿನ ಒತ್ತುಕೊಡುತ್ತಾರೆ. ಇಡೀ ಕುಟುಂಬದ ಜವಾಬ್ದಾರಿಯನ್ನು ಅವರೇ ನಿರ್ವಹಿಸುತ್ತಿದ್ದರು. ಹೀಗಾಗಿ ಅಂದು ಮಾತೃಪ್ರಧಾನ ವ್ಯವಸ್ಥೆ ಜಾರಿಯಲ್ಲಿತ್ತು ಇದರಿಂದ ಇಲ್ಲಿರುವ ಧಾರ್ಮಿಕ ವ್ಯವಸ್ಥೆ, ಸಂಪ್ರದಾಯ, ಆಚರಣೆಗಳೆಲ್ಲವೂ ಸ್ತ್ರೀ ಪ್ರಧಾನವಾಗಿತ್ತು. ಸಿದ್ಧರು ತಮ್ಮ ಶಕ್ತಿಯನ್ನು ಹೆಚ್ಚಿಸಿಕೊಳ್ಳಲು ಸ್ತ್ರೀಯರನ್ನು ಬಳಸಿಕೊಳ್ಳುತ್ತಿದ್ದರು. ಜಗತ್ತನ್ನು ಆಳುವ ಶಕ್ತಿ ಸ್ತ್ರೀದೈವಕ್ಕಿದೆ ಎಂದು ಹೇಳುತ್ತಿದ್ದರು. ಈ ವಿಚಾರವು ಅಂದಿನ ಜನಜೀವನದ ಮೇಲೆ ಪ್ರಭಾವ ಬೀರಿತ್ತು. ಹೀಗಾಗಿ ಅವಳು ಅಸಹಾಯಕಳಾಗಿ ನಾಲ್ಕು ಗೋಡೆಗಷ್ಟೇ ಸೀಮಿತಗೊಳ್ಳದೆ ಯಾವುದೇ ವಿಷಯ, ವಿಚಾರ ಬಂದಾಗ ಪುರುಷನ ಸರಿಸಮನವಾಗಿ ನಿಂತು ನಿರ್ಣಯಗಳನ್ನು ಕೈಗೊಳ್ಳುತ್ತಿದ್ದಳು. ಅದಕ್ಕೆ ಒಳ್ಳೆಯ ಉದಾಹರಣೆ ಎಂದರೆ -ಬಾರಾಮತಿ ತೇರಾಮತಿ ಪಟ್ಟಣದ ಅರಸರಾದ ತುಕ್ಕಪ್ಪರಾಯ ಸೋಮರಾಯ ಎಂಬ ಸೋದರರು. ಭೀಕರ ಬರಗಾಲ ಬಿದ್ದಾಗ ಪಶುಗಳಿಗೆ ಅನ್ನ ನೀರು ಸಿಗದೆ ಒದ್ದಾಡುತ್ತಿರುವಾಗ ಅವುಗಳ ರಕ್ಷಣೆಗಾಗಿ ಊರು ಬಿಟ್ಟು ಹೋಗುತ್ತಾರೆ. ಅದರಲ್ಲಿ ತುಕ್ಕಪ್ಪರಾಯನು ತನ್ನ ಒಡೆತನದ ಎರಡೂ ಪಟ್ಟಣಗಳ ಆಡಳಿತದ ಜವಾಬ್ದಾರಿಯನ್ನು ತನ್ನ ಹೆಂಡತಿ ಅಮೃತಾಬಾಯಿಗೆ ಒಪ್ಪಿಸುತ್ತಾನೆ. ಇದಕ್ಕೆ ಸಿದ್ಧರ ವಿಚಾರಗಳ ಪ್ರಭಾವವೇ ಕಾರಣ.

ಮಾಳಿಂಗರಾಯನ ಗುರು ಬೀರಪ್ಪನ ವಿಚಾರದಲ್ಲಿಯೂ ಸ್ತ್ರೀಯೇ ಅವನನ್ನು ರಕ್ಷಿಸುತ್ತಾಳೆ. ಬೀರಪ್ಪ ಜನಿಸಿದ ಕೂಡಲೇ ಆತನ ಸೋದರಮಾವ ಕಾಳಿ ನಾರಾಯಣನು ಬೀರಪ್ಪನಿಂದ ತನ್ನ ಜೀವಕ್ಕೆ ಅಪಾಯವಿದೆ ಎಂದು ಭಾವಿಸಿ ಅವನಿರುವ ತೊಟ್ಟಿಲನ್ನು ಅರಣ್ಯದಲ್ಲಿ ಬಿಟ್ಟು ಬರುವಂತೆ ತನ್ನ ಆಳುಗಳಿಗೆ ಆದೇಶಿಸುತ್ತಾನೆ. ಆ ತೊಟ್ಟಿಲನ್ನು ಹೊತ್ತುಕೊಂಡು ಅರಣ್ಯಕ್ಕೆ ಹೋಗುವಾಗ ಮಾರ್ಗಮಧ್ಯದಲ್ಲಿ ಆಳುಗಳಿಗೆ ಹಸಿವು ನೀರಡಿಕೆಯಾಗಿ ಸೂರಮ್ಮ ದೇವಿ ಇಟ್ಟಿದ

ತೊಟ್ಟಿಲಿನ ನೈವೇದ್ಯ, ಪೂಜೆಯ ನೀರು ಇದ್ದಷ್ಟು ತಿನ್ನೋಣ ಎಂದು ಕುಳಿತರೆ ಅವೆಲ್ಲ ಸರಿಯದಂತೆ ಮಾಡಿ ಬೀರಪ್ಪನನ್ನು ಬದುಕಿಸಿಕೊಳ್ಳುತ್ತಾಳೆ.

ಈ ಕುರಿ ಕಾಯುವ ವೃತ್ತಿಯು ಸಹ ಮಹಿಳೆಯಿಂದಲೇ ಆರಂಭವಾಗಿದೆ. ಪ್ರಾರಂಭದಲ್ಲಿ ಕೈಲಾಸದಿಂದ ಕುರಿಗಳನ್ನು ಭೂಮಿಗೆ ಹೊಡೆದುತಂದಾಕೆ ಪಾರ್ವತಿ. ಭೂಮಿಗೆ ಬಂದ ಕುರಿಗಳನ್ನು ದಿಬ್ಬಿಯ ದಿಬರಾಯನ ಏಳುಜನ ಹೆಣ್ಣು ಮಕ್ಕಳು, ಏಳು ಹಿಂಡು ಕುರಿಗಳನ್ನು ಕಾಯುತ್ತಿದ್ದರು. ಇವುಗಳನ್ನೇ ಮುಂದೆ ಬೀರಪ್ಪನನ್ನು ಸಾಕಿ ಸಲಹಿದ ಮಾಯವ್ವ ಕಾಯುತ್ತಾಳೆ. ಈ ಮಾಯವ್ವ ದಿಬರಾಯನ ಸಾಕು ಮಗಳು ಮಾಯವ್ವ ಸಾಕಿದ ಕುರಿಗಳನ್ನೇ ಬೀರಪ್ಪ ಕಾಯುತ್ತಾನೆ. ಮುಂದೆ ಬೀರಪ್ಪ ಕಾಯ್ದು ಕುರಿಗಳನ್ನೇ ಮಾಳಿಂಗರಾಯ ಕಾಯ್ದ ಎನ್ನುವುದರಲ್ಲಿ ಸ್ತ್ರೀಯರ ಮಹತ್ವವನ್ನು ಅರಿಯಬಹುದು.

೪

ಮಾಳಿಂಗರಾಯನ ಮನೆತನದ ಮೂಲ ಗುರುಗಳಾದ ಸೋನಾರಿ ಸಿದ್ಧ ಗುರುಗಳು ಪಾಠ ಪ್ರವಚನ ಪವಾಡಕ್ಕಷ್ಟೇ ಸೀಮಿತಗೊಳ್ಳದೆ. ಅಲ್ಲಿರುವ ಸ್ತ್ರೀಯರನ್ನು ಪರೀಕ್ಷೆಗೆ ಒಳಪಡಿಸುವ ಮೂಲಕ ಅವರ ವ್ಯಕ್ತಿತ್ವವನ್ನು ಜನರಿಗೆ ಪರಿಚಯಿಸುವ ಕಾರ್ಯ ಮಾಡುತ್ತಾರೆ.

ಒಂದು ಸಲ ಸೋನಾರಿ ಸಿದ್ಧನು ಕಣ್ಣವ್ವನನ್ನು ಪರೀಕ್ಷಿಸಬೇಕೆಂದು ಬರುತ್ತಾನೆ. ಈ ವಿಷಯ ತುಳಜಾಪುರದ ಅಂಬಾಭವಾನಿ ಕಣ್ಣವ್ವಳನ್ನು ತಿಳಿಸಿ ಎಚ್ಚರಿಕೆ ನೀಡುತ್ತಾಳೆ. ಯಥಾ ಪ್ರಕಾರ ಕಣ್ಣವ್ವ ನಿದ್ದೆಯಿಂದ ಎದ್ದು ಹುಲ್ಲಕ್ಕಿ ತೆಗೆದುಕೊಂಡು ನೆಲ್ಲಕ್ಕಿ ಬಾನ ತಯಾರಿಸಿ ಸೋನಾರಿ ಸಿದ್ಧರಿಗೆ ಊಟ ಬಡಿಸಲು ತಯಾರಾಗುತ್ತಾಳೆ. ಆಕೆಯ ಮನ ಪರೀಕ್ಷೆಗಾಗಿ ತನ್ನ ಮಾಯೆ-ಮಂತ್ರದಿಂದ ಅದೇಕ್ಷಣ ಏಕ ಕಾಲಕ್ಕೆ ಸುಮಾರು ಏಳುನೂರು ಜನ ಸಿದ್ಧರು ಹುಟ್ಟುವಂತೆ ಮಾಡುತ್ತಾನೆ. ಅವರಿಗೆಲ್ಲ ಊಟ ಬಡಿಸುವಂತೆ ಸೂಚಿಸುತ್ತಾನೆ. ಇದರಿಂದ ಗಾಬರಿಗೊಂಡ ಕಣ್ಣವ್ವ ಸುಮ್ಮನೆ

ನಿಂತುಬಿಡುತ್ತಾಳೆ. ವಿಷಯ ತಿಳಿದ ಅಂಬಾಭವಾನಿ ಕಷ್ಟಕಾಲದಲ್ಲಿ ಸ್ವತಃ ಬಂದು ಆ ಕಷ್ಟದಿಂದ ಪಾರು ಮಾಡುತ್ತಾಳೆ.

ಸಿದ್ಧರು, ದೇವ ದೇವತೆಗಳು ಮೇಲಿಂದ ಮೇಲೆ ಬಂದು ಸೋಮರಾಯ, ಕಣ್ಣವ್ವ, ಜಕ್ಕಪ್ಪ, ಮಾಳಿಂಗರಾಯನನ್ನು ಒಂದಲ್ಲ ಒಂದು ರೀತಿಯಲ್ಲಿ ಕಷ್ಟಗಳನ್ನು ಕೊಡುತ್ತಾ, ಪರೀಕ್ಷೆಗೆ ಒಡ್ಡುತ್ತ ಅವರಲ್ಲಿರುವ ದೈವೀ ಶಕ್ತಿಯನ್ನು ಜಗತ್ತಿಗೆ ಸಾರುತ್ತ ಹೋಗುತ್ತಾರೆ.

ಇನ್ನೊಂದು ಸಲ ಅದೇ ಕಣ್ಣವ್ವನನ್ನು ಪರೀಕ್ಷೆಗೆ ಒಳಪಡಿಸುತ್ತಾರೆ. ಭೀಕರ ಬರಗಾಲ ಬಿದ್ದು, ಹೆಂಡತಿ ಕಣ್ಣವ್ವನೊಂದಿಗೆ ಸೋಮರಾಯ ಪಶುಗಳನ್ನು ಹೊಡೆದುಕೊಂಡು ನೀರಿದ್ದಲ್ಲಿಗೆ ಬರುತ್ತಾರೆ. ಅಲ್ಲಿರುವ ಏಳ್ನೂರು ಜನಬೇಡರು ಇವರ ಹಸುಗಳನ್ನು ಕಳುವು ಮಾಡಲು ಬಂದಿರುತ್ತಾರೆ ಇದೇ ವೇಳೆ ಸೋನಾರಿ ಸಿದ್ಧನು ಸಹ ಇವರನ್ನು ಪರೀಕ್ಷಿಸಲೆಂದು ಅದೇ ಗುಡ್ಡಕ್ಕೆ ಬರುತ್ತಾನೆ.

ನನಗೆ ಬಂಜೆ ಕಪಿಲೆ ಆಕಳ ಹಾಲು ಕುಡಿಯಲು ಬೇಕೆಂದು ಸೋನರಿಸಿದ್ಧ ಸೋಮರಾಯನಿಗೆ ಕೇಳುತ್ತಾನೆ. ಇದುವರೆಗೂ ಆ ಕರಿ ಅಕಳ ಮೇಲೆ ಹೋರಿ ಹಾರಿಲ್ಲ, ಅದು ಗರ್ಭಧರಿಸಿಲ್ಲ. ಅಂಥದರ ಹಾಲು ಕುಡಿದರೆ ನನಗೆ ತೃಪ್ತಿಯಾಗುತ್ತದೆ ಎಂದು ಆಜ್ಞೆ ಮಾಡುತ್ತಾನೆ ಅದಕ್ಕೆ ಸೋಮರಾಯ ತನ್ನ ಹೆಂಡತಿಗೆ ಈ ವಿಷಯ ತಿಳಿಸುತ್ತಾನೆ. ಆಕೆ ಯಥಾಪ್ರಕಾರ ಅದೇ ಕರಿಯ ಅಕಳ ಹಾಲು ಹಿಂಡಿದಾಗ ಸಾಕಷ್ಟು ಹಾಲು ಬರುತ್ತದೆ. ಆ ಹಾಲನ್ನು ಸೋನಾರಿಸಿದ್ಧ ಹಾಗೂ ಆತನ ಏಳು ನೂರು ಜನ ಶಿಷ್ಯರು ಕುಡಿದು ಸಂತೃಪ್ತಿ ವ್ಯಕ್ತಪಡಿಸುತ್ತರೆ.

ಸೋನಾರಿ ಸಿದ್ಧ ಈ ಏಳುನೂರು ಆಕಳುಗಳನ್ನು ಗುಡ್ಡದಲ್ಲಿಯೇ ಬಿಟ್ಟು ಮನೆಗೆ ಹೋಗೋಣವೆಂದು ನುಡಿಯುತ್ತಾನೆ. ಅದಕ್ಕೆ ಸೋಮರಾಯ ನಿರಾಕರಿಸುತ್ತಾನೆ. ಪಶುಸಂಪತ್ತೆ ನಮ್ಮ ಮೂಲ ಆಸ್ತಿ. ಅವುಗಳಿಗಿಂತ ದೊಡ್ಡದು ಮತ್ತೊಂದಿಲ್ಲವೆಂದು ಸಾರುತ್ತಾನೆ. ಅಂದರೆ ಗುರುವಿಗಿಂತ ಪಶುಸಂಪತ್ತೇ ದೊಡ್ಡದು ಎಂಬ ಭಾವನೆ ಅವನಲ್ಲಿ ಕಾಣುತ್ತದೆ.

೨

ಹೀಗೆ ಹಲವು ರೀತಿಯ ಪರೀಕ್ಷೆ, ಪವಾಡಗಳ ಮೂಲಕ ಮಾಳಿಂಗರಾಯನ ಹುಟ್ಟು, ಬೆಳವಣಿಗೆ, ಸಮಾಜ ಉದ್ಧಾರದ ಕೆಲಸಕಾರ್ಯಗಳು ಪರಿಚಯವಾಗುತ್ತವೆ. ಅನೆಗುಂದಿ ಎಂಬ ಅರಸು ಮನೇತನವನ್ನು ಕರಿಗೌಡ ಮತ್ತು ಕೆಂಚಗೌಡ ಎಂಬ ಪ್ರಬಲ ನಾಯಕರು ಆಳುತ್ತಿದ್ದರು. ಅವರು ಅನ್ಯಾಯದ ವಿರುದ್ಧ ಸಿಡಿದು ನಿಂತು ಶಾಂತಿ ಸಹಬಾಳ್ವೆ ನೆಲೆಗೊಳ್ಳುವಂತೆ ಮಾಡಿದರು. ಕರಿಗೌಡನಿಗೆ ಇಬ್ಬರು ಜನ ಮಕ್ಕಳು. ಇವರು ಸಹ ತಂದೆಯಂತೆ ಪರಾಕ್ರಮಿಗಳು. ತಂದೆ ಹಾಕಿಕೊಟ್ಟ ಮರ್ಗದಲ್ಲಿಯೇ ನಡೆಯುವವರು. ಇಬ್ಬರು ಪ್ರಾಯಕ್ಕೆ ಬಂದಾಗ ಮದುವೆ ಮಾಡಬೇಕೆಂದು ನಿಶ್ಚಯಿಸುತ್ತಾರೆ. ಚಿಕ್ಕಪ್ಪ ರಾಯನಿಗೆ ಸಾವಳಿ ಗ್ರಾಮದ ಗೌಡರ ಮಗಳಾದ ಅಮೃತಬಾಯಿ ಹಾಗೂ ಸೋಮರಾಯನಿಗೆ ಇನ್ನೊಬ್ಬ ಮಗಳು ಕನಕಬಾಯಿಯೊಂದಿಗೆ ಮದುವೆ ಮಾಡುತ್ತಾರೆ.

ಮುಂದೆ ಸೋಮರಾಯ ತಮ್ಮ ಸುತ್ತ ಮುತ್ತಲಿನ ಕೆಲವು ಹಳ್ಳಿಗಳನ್ನು ಸೇರಿಸಿ 'ಬಾರಾಮತಿ' ಎಂಬ ಪಟ್ಟಣ ಸ್ಥಾಪಿಸಿ ಅದನ್ನು ಆಳುತ್ತಿದ್ದನು. ಈತನ ಶುದ್ಧ ಹಾಗೂ ಸಾತ್ವಿಕ ಗುಣವು ಆ ಪಟ್ಟಣದಲ್ಲಿ ಶಾಂತಿ ನೆಲೆಗೊಳ್ಳಲು ಕಾರಣವಾಗಿತ್ತು.

ಸೋಮರಾಯನ ಅಣ್ಣ ತುಕ್ಕಪ್ಪರಾಯ ನದಿಯ ಬಲದಂಡೆಯಲ್ಲಿದ್ದ ಚಿಕ್ಕ ಪುಟ್ಟ ಹಳ್ಳಿಗಳನ್ನು ಸೇರಿಸಿ 'ತೇರಾಮತಿ' ಎಂಬ ಮತ್ತೊಂದು ಪಟ್ಟಣವನ್ನು ಸ್ಥಾಪಿಸಿ ಅದನ್ನು ಆಳುತ್ತಿದ್ದ. ಕೆಲವು ದಿನಗಳ ನಂತರ ಆ ಎರಡೂ ಪಟ್ಟಣಗಳನ್ನು ಸೇರಿಸಿ ಒಂದು ರಾಜ್ಯವಾಗಿಸಿ ಆ ಪಟ್ಟಣಕ್ಕೆ ತುಕ್ಕಪ್ಪರಾಯನನ್ನು ಕೂಡಿಸಿದರೂ ಕಿರಿಯ ಮಗ ಸೋಮರಾಯನಿಗೆ ಊರ ಗೌಡಿಕೆಯನ್ನು ವಹಿಸಿಕೊಟ್ಟರು. ಗೌಡಿಕೆ ಮಾಡುತ್ತ ಏಳುನೂರು ಹಸುಗಳನ್ನು ಕಾಯುತ್ತ ಜೀವನ ಸಗಿಸುತ್ತಿದ್ದನು, ಇವರಿಬ್ಬರನ್ನು ಊರ ಜನ ತುಂಬಾ ಗೌರವದಿಂದ ಕಾಣುತ್ತಿದ್ದರು. ಇವರು ಸಹ ಅಲ್ಲಿನ ಪ್ರಜೆಗಳೊಂದಿಗೆ ಸೌಜನ್ಯದಿಂದ ನಡೆದುಕೊಳ್ಳುತ್ತಿದ್ದರು.

ಹೀಗೆ ಸುಮಾರು ಹನ್ನೆರಡು ವರ್ಷಗಳು ಕಳೆಯುತ್ತವೆ ಸಕಲ ಸಂಪತ್ತು ಮನೆಯಲ್ಲಿ ತುಳುಕಾಡುತ್ತದೆ. ಅದರೆ ಮಕ್ಕಳು ಅಗದಿರುವ ಚಿಂತೆ ಎಲ್ಲರನ್ನು ಕಾಡುತ್ತಿತ್ತು. ಅದಕ್ಕೆ ದೇವರು ದಿಂಡರ-ಮೋರೆ ಹೋಗುತ್ತಾರೆ ಒಂದು ಸಲ ಆಕಸ್ಮಿಕವಾಗಿ ತಮ್ಮ ಮೂಲ ಗುರು ಸೋನಾರ ಸಿದ್ಧನು ಆ ಊರಿಗೆ ಬರುತ್ತಾನೆ. ವಿಷಯ ತಿಳಿದ ಸೋದರರಿಬ್ಬರು ಗುರುಗಳನ್ನು ತಮ್ಮ ಮನೆಗೆ ಬರಮಾಡಿಕೊಂಡು ಭಕ್ತಿಯಿಂದ ಪೂಜಿಸುತ್ತಾರೆ. ಇದೇ ವೇಳೆ ತಮ್ಮ ಮನಸ್ಸಿನಲ್ಲಿರುವ ಕೊರಗನ್ನು ಗುರುಗಳ ಮುಂದೆ ಇಡುತ್ತಾರೆ. ಈ ಕುರಿತು ವಿಚಾರಿಸಿದ ಸೋನಾರಿ ಸಿದ್ಧರು ತುಕ್ಕಪ್ಪರಾಯನ ಕಡೆ ಮುಖ ಮಾಡಿ ನೀನೇನೂ ಚಿಂತೆ ಮಾಡಬೇಡ ನಿನಗೆ ಸಂತಾನಭಾಗ್ಯ ಲಭಿಸುತ್ತದೆ. ಆದರೆ ನೀನು ಹನ್ನೆರಡು ವರ್ಷಗಳವರೆಗೆ ತಪಸ್ಸು ಮಾಡಬೇಕು: ನಿನ್ನ ತಪಸ್ಸಿಗೆ ಮೆಚ್ಚಿ ಶಿವ ಇಬ್ಬರು ಪುತ್ರರನ್ನು ದಯಪಾಲಿಸುತ್ತಾನೆ. ಇವರಿಬ್ಬರು ಸಾಮಾನ್ಯರಲ್ಲ, ಹಾಲುಮತಕ್ಕೆ ಒಡೆಯರಾಗಿ ಮೆರೆಯುತ್ತಾ. ಅಷ್ಟೇ ಅಲ್ಲಿ ಲೋಕಕಲ್ಯಾಣ ಮಾಡುತ್ತ ಜಗತ್‌ಪ್ರಸಿದ್ಧರಾಗುತ್ತಾರೆ ಎಂದು ನುಡಿಯುತ್ತಾನೆ.

ಗುರುವಿನ ಅಪ್ಪಣೆಯಂತೆ ತುಕ್ಕಪ್ಪರಾಯನು ಅಧಿಕಾರವನ್ನು ತಮ್ಮನ ಹೆಗಲಿಗೆ ಏರಿಸಿ ಹೆಂಡತಿಯೊಡನೆ ತಪಸ್ಸಿಗೆ ಹೊರಡುತ್ತಾನೆ ಉಗ್ರವಾಗಿ ತಪಸ್ಸು ಮಾಡುತ್ತಿರುತ್ತಾನೆ. ತಪಸ್ಸಿನ ವೇಳೆ ಶಿವ ಮತ್ತು ಇಂದ್ರನು ನಾನಾರೀತಿಯ ತೊಂದರೆಗಳನ್ನು ಕೊಟ್ಟು ಅವರನ್ನು ಪರೀಕ್ಷಿಸುತ್ತಾರೆ. ಆ ಎಲ್ಲ ಪರೀಕ್ಷೆಯಲ್ಲಿ ಗೆದ್ದು ಯಶಸ್ವಿಯಾದಾಗ ಶಿವ-ಪಾರ್ವತಿ ಪ್ರತ್ಯಕ್ಷರಾಗುತ್ತಾರೆ. ಅವರ ಭಕ್ತಿಗೆ ಮೆಚ್ಚಿ ಏನು ವರ ಬೇಕೆಂದು ಕೇಳುತ್ತಾರೆ. ಸಂತಾನ ಭಾಗ್ಯ ಎಂದಾಗ ಜಪಮಣಿ ಮತ್ತು ಮಣಿಕ ಮಣಿಕೊಟ್ಟು ಜಪಿಸುವಂತೆ ಆದೇಶ ನೀಡುತ್ತಾರೆ. ಅವರ ಬಯಕೆಯಂತೆ ಜಪಮಣಿಯಿಂದ ಜಕ್ಕಪ್ಪ, ಮಾಣಿಕ್ಯಮಣಿಯಿಂದ ಮಾಳಿಂಗರಾಯ ಹುಟ್ಟಿ ಬರುತ್ತಾರೆ. ಮೊದಲು ಜಕ್ಕಪ್ಪರಯ ಹುಟ್ಟುತ್ತಾನೆ ಎರಡು ವರ್ಷಗಳ ನಂತರ ಮಾಳಿಂಗರಾಯ ಹುಟ್ಟುತ್ತಾನೆ. ಈತ ಬಸವಣ್ಣನ ಅವತಾರವೆಂದು ಸೋನಾರ ಸಿದ್ಧ ಹೇಳುತ್ತಾನೆ.

ಚಿಕ್ಕಪ್ಪ ಮತ್ತು ಮಾಳಪ್ಪ ಇಬ್ಬರೂ ವೀರಪುರುಷರಾಗಲು ದೈವದ ಅವತಾರವೇ ಕಾರಣ. ದೈವೀಶಕ್ತಿಯ ಪ್ರೇರಣೆಯಿಂದ ಜನಿಸಿದ ಕಾರಣ ಇವರು ಆರಂಭದಿಂದಲೇ ಹಲವಾರು ಪವಾಡಗಳನ್ನು ಮಾಡುತ್ತಾರೆ. ಜನಪದ ಮತ್ತು ಬುಡಕಟ್ಟು ಸಮುದಾಯಗಳಲ್ಲಿ ಬರುವ ಸಾಂಸ್ಕೃತಿಕ ವೀರರನ್ನು ಚಿತ್ರಿಸುವಾಗ ಚಿಕ್ಕಂದಿನಲ್ಲಿಯೇ ಅಗಾಧ ಸಾಧನೆ ಮಾಡಿದ ಮಹಾನ್ ಪುರುಷನಂತೆ ಬಿಂಬಿಸಲಾಗುತ್ತಾದೆ.

ಇಲ್ಲಿ ಮೂರು ವರ್ಷದ ಮಾಳಿಂಗರಾಯ ತನ್ನ ವಾರಿಗೆಯ ಗೆಳೆಯರ ಕೂಡ ನದಿಯ ದಂಡೆಯ ಮೇಲೆ ದಿನಾಲು ಅಟ ಆಡುತ್ತಿರುತ್ತಾರೆ. ಉಳಿವ ಗೆಳೆಯರೆಲ್ಲ ಮಣ್ಣಾಟ, ಚಿಣ್ಣಿ ದಾಂಡು, ಗೋಲಿ ಆಟ ಆಡುತ್ತಿದ್ದರೆ, ಮಾಳಿಂಗರಾಯ ಮಾತ್ರ ದೂರದಲ್ಲಿ ಅಕ್ಷರಗಳನ್ನು ಬರೆದು ಜಪಿಸುತ್ತಿದ್ದ. ಈತನ ಕಲಿಕೆ ಮತ್ತು ಜಪ ತಪವನ್ನು ನೋಡಿದ ಆದಿಶೇಷ ಭಕ್ತಿ ಎಂದರೆ ಹೀಗಿರಬೇಕೆಂದು ತನ್ನ ಏಳು ಹೆಡೆಗಳನ್ನು ಬಿಚ್ಚಿ ಅವನಿಗೆ ನೆರಳಾಗುವಂತೆ ಮಾಡುತ್ತಿದ್ದೆ.

ಮಾಳಿಂಗರಾಯ ದಿನಾ ಮರಳಿನ ದಿಬ್ಬದಲ್ಲಿ ಒಂದು ಲಿಂಗ ಮಾಡಿ ಧ್ಯಾನ ಮಾಡುವನು. ಅದಿಶೇಷ ದಿನಾ ಹೆಡೆ ಬಿಚ್ಚಿ ನೆರಳು ಮಾಡುವನು. ಈ ದೃಶ್ಯ ನೀರಿಗೆಂದು ಬಂದ ಮಾಳಿಂಗನ ತಾಯಿ ಕಣ್ಣವ್ವ ಒಂದು ಸಲ ನೋಡಿ ಬಿಡುತ್ತಾಳೆ. ನನ್ನ ಮಗನಿಗೆ ಹಾವು ಕಡಿಯುತ್ತದೆ ಎಂದು ಗಾಬರಿಗೊಂಡು ತಲೆ ಸುತ್ತು ಬಂದು ಕೆಳಗೆ ಬೀಳುತ್ತಾಳೆ. ನಂತರ ಎಚ್ಚರಗೊಂಡಾಗ ಮಗ ಮಾಳಿಂಗರಾಯ ಬಂದು ತಬ್ಬಿಕೊಳ್ಳುತ್ತಾನೆ ಅವನನ್ನು ಮುಟ್ಟಿ ನೋಡುತ್ತಾಳೆ. ಆದರೆ ಹಾವು ಕಡಿದ ಗಾಯ ಎಲ್ಲಿಯೂ ಕಾಣುವುದಿಲ್ಲ. ಆವಾಗ ನಿಟ್ಟುಸಿರು ಬಿಡುತ್ತಾಳೆ. ಆಮೇಲೆ ಉಳಿದ ಮಕ್ಕಳು ಬಂದು ಮಾಳಿಂಗರಾಯನ ಧ್ಯಾನ, ನಾಗಪ್ಪನ ಗೆಳೆತನದ ಕುರಿತು ವಿಸ್ತಾರವಾಗಿ ಹೇಳುತ್ತಾರೆ.

ಮಾಳಪ್ಪನು ಒಂದು ಸಲ ಹಾವು ಕಡಿದ ಬಾಲಕನನ್ನು ಬದುಕಿಸಿರುತ್ತಾನೆ. ಹಾವನ್ನು ಕೈಯಲ್ಲಿ ಹಿಡಿದು ಅದರ ಸೊಕ್ಕಡಗಿಸಿ ಸದಾ ನನ್ನ ಕೈಯಲ್ಲಿ ನಾಗಬೆತ್ತವಾಗಿರಬೇಕೆಂದು ಆಜ್ಞೆ ಮಾಡುತ್ತಾನೆ. ನಡೆದ ಇಂಥ ವಿಷಯವನ್ನೆಲ್ಲ

ತಾಯಿಗೆ ವಿವರವಾಗಿ ತಿಳಿಸಿ, ಇನ್ನು ಕೆಲವೇ ದಿನಗಳಲ್ಲಿ ಆ ಆದಿಶೇಷ ನನ್ನ ಕೈಯಲ್ಲಿ ನಾಗಬೆತ್ತವಾಗಿ ದೊರೆಯುತ್ತಾನೆ ಎಂದು ನುಡಿಯುತ್ತಾನೆ. ಆಗ ಕಣ್ಣವ್ವ ಪ್ರೀತಿಯಿಂದ ಮಗನಿಗೆ ತಬ್ಬಿಕೊಂಡು ಮನೆಗೆ ಕರೆದುಕೊಂಡು ಹೋಗುತ್ತಾಳೆ.

೬

ಮೂಲತಃ ಪಶುಪಾಲಕನಾಗಿದ್ದ ಮಾಳಿಂಗರಾಯ ಎಲ್ಲ ಜೀವಜಂತುಗಳನ್ನು ಸಮಾನವಗಿ ಪ್ರೀತಿಸುತ್ತಿದ್ದನು. ಚಿಕ್ಕವನಿದ್ದಗ ಒಂದು ಸಲ ಹೊಳೆಯಲ್ಲಿನ ಮೀನುಗಳನ್ನು ಹಿಡಿದಿಡಿದು ಬಿಡುತ್ತಿದ್ದ. ಇದನ್ನು ನೋಡಿದ ಕೆಲ ಮಡಿವಂತ ಜನರು ಮಾಳಿಂಗರಾಯ ಸತ್ತ ಮೀನುಗಳನ್ನು ಹೊಳೆಯಲ್ಲಿ ಬಿಟ್ಟು ನೀರು ಕೆಡಿಸುತ್ತಿದ್ದಾನೆ ಎಂದು ಆಡಿಕೊಳ್ಳುತ್ತಾರೆ, ಊರಾಳುವನ ಮಕ್ಕಳಿಗೆ ಹೇಳುವರಾರು ತಾವು ಆಡಿದ್ದೇ ನ್ಯಾಯ ಮಾಡಿದ್ದೇ ಕಾರ್ಯ. ಹೀಗೆಂದು ಆಡಿಕೊಳ್ಳುವ ಮಾತು ಕೇಳಿ ಮಾಳಿಂಗರಾಯನಿಗೆ ಬಲು ಕೋಪ ಬರುತ್ತದೆ. ಆದರೂ ಸಹಿಸಿಕೊಂಡು ಸತ್ತ ಮೀನುಗಳಿಗೆ ಜೀವ ಬರುವಂತೆ ಮಾಡಿ ಪುನಃ ಎಲ್ಲರಿಂದ ಸೈ ಎನಿಸಿಕೊಂಡು ಆಡಿಕೊಂಡವರೇ ಜಯಕಾರ ಹಾಕುವಂತೆ ಮಾಡುತ್ತಾನೆ.

ಮಾಳಿಂಗರಾಯ ಮತ್ತು ಜಕ್ಕಪ್ಪನ ಎಲ್ಲ ಪವಾಡಗಳ ಹಿಂದೆ ಗೋರಖ ವಿದ್ಯೆ ಕಾರಣವಾಗಿದೆ. ಈ ಗೋರಖವಿದ್ಯೆಯನ್ನು ಸೋನಾರಸಿದ್ಧರು ಹೇಳಿಕೊಡುತ್ತಿದ್ದರು. ಅದನ್ನು ಕಲಿತು ಹಲವಾರು ಪವಾಡಗಳನ್ನು ಮಾಡಿ ಅಪಾರಜನ ಶಿಷ್ಯರನ್ನಾಗಿ ಮಾಡಿಕೊಳ್ಳುತ್ತಾನೆ. ಅದಕ್ಕಾಗಿ ಮಾ◌ಪ್ಪನನ್ನು 'ಸಿದ್ಧ ಮಾಳಪ್ಪ, ಸಿದ್ಧ ಸಿದ್ಧರಲ್ಲಿ ಹೆಚ್ಚಿನ ಸಿದ್ಧ' ಎಂದು ಕರೆಯುತ್ತಿದ್ದರು.

ಚೌತೀಸ ವಿದ್ಯೆಗಳನ್ನು ಕಲಿತ ಮಾಳಪ್ಪನ ಭವಿಷ್ಯವಾಣಿ ಯಾವತ್ತು ಸುಳ್ಳಾಗಿದ್ದಿಲ್ಲ. ಪವಾಡಗಳಿಂದ ಜನರನ್ನು ತಮ್ಮ ತ್ತ ಸೆಳೆದುಕೊಳ್ಳುತ್ತಿದ್ದ ಸಿದ್ಧರನ್ನು ಧರ್ಮರಾಜ ಬಂಧಿಸಿದ್ದನು. ವಿಷಯ ತಿಳಿದು ಮಾಳಿಂಗರಾಯ ನೇರವಾಗಿ ಪಾಂಡವರ ಕೋಟೆ ಭೇದಿಸಿ ಬಂಧಿಸಿಟ್ಟಿದ್ದ ಸಿದ್ಧರನ್ನು ಬಿಡಿಸಿಕೊಂಡು ತರುತ್ತಾನೆ. ಮತ್ತೆ ಮುಂದಿನ ಆಗು-ಹೋಗುಗಳ ಕುರಿತು ರಾಜನಿಗೆ ಎಚ್ಚರಿಸಿ ಬರುತ್ತಾನೆ.

ಗೋವು ಸಾಕಾಣಿಕೆಯೇ ಅವರ ಮುಖ್ಯ ಕಸಬಾಗಿತ್ತು. ಪಶುಗಳೇ ಅವರ ಜೀವನಾಧಾರ. ಆ ಪಶು ಸಂಪತ್ತನ್ನು ಕಾಪಾಡಿಕೊಳ್ಳಲು ಯಾವ ಕಾರ್ಯಕ್ಕೂ ಸಿದ್ಧರು. ಅದು ಬೇಸಿಗೆಯ ಕಾಲ ಇವರು ಸಾಕಿದ ಏಳುನೂರು ಗೋವುಗಳಿಗೆ ಬೇನೆ ಬಂದು ಮೇವು ನೀರು ಮುಟ್ಟದೆ ರಕ್ತವನ್ನೇ ಹಿಂಡುತ್ತಿರುತ್ತವೆ. ಇದು ಚಿಂತೆಗೆ ಕಾರಣವಾಗುತ್ತದೆ. ಆದರೂ ಅಲ್ಲಿ ಇಲ್ಲಿ ತೋರಿಸಿ ಗೋಪಾಲಕರು ಆರಾಧಿಸುವ ದೇವತೆಯ ಭಸ್ಮವನ್ನು ತಂದು ಗೋವುಗಳ ಮೇಲೆ ಹಾಕುತ್ತಾರೆ. ಜೊತೆಗೆ ಶುಕ್ರವಾರ ದಿನ ದೇವಿಗೆ ನರಬಲಿ ಕೊಡುತ್ತೇನೆ ಎಂದು ಬೇಡಿಕೊಂಡು, ಅದರಂತೆ ನರಬಲಿಯನ್ನೂ ಸಹ ಕೊಡುತ್ತಾರೆ. ಮನುಷ್ಯನ ಪ್ರಾಣಕ್ಕಿಂತ ಇವರಿಗೆ ಗೋವುಗಳೇ ಪ್ರಿಯವಾಗಿದ್ದವು. ಅವುಗಳ ಕ್ಷೇಮಕ್ಕಾಗಿ ತಮ್ಮ ಪ್ರಾಣವನ್ನು ಸಹ ಕೊಡಲು ಸಿದ್ಧರಿದ್ದರು.

ಮಾಳಿಂಗರಾಯ ಕಾಲಜ್ಞಾನಿ ಕೂಡ ಆಗಿದ್ದ. ಆತ ಹೇಳಿದ್ದು ಯಾವತ್ತು ಹುಸಿ ಹೋಗುತ್ತಿರಲಿಲ್ಲ. ಒಂದು ದಿನ ಎಲ್ಲರೂ ಕೂಡಿದ್ದಾಗ ಇನ್ನ ಕೆಲವೇ ದಿನಗಳಲ್ಲಿ ಈ ನಾಡಿಗೆ ಬರಗಾಲ ಬೀಳುತ್ತದೆ. ನಾಡಿನ ಜನರೆಲ್ಲ ಅನ್ನ ನೀರಿಗಾಗಿ ಪರದಾಡುವಂತಾಗುತ್ತದೆ. ಅನೇಕ ಕಷ್ಟಗಳಿಗೆ ಸಿಲುಕಬೇಕಾಗುತ್ತದೆ. ನಮ್ಮ ಗೋವುಗಳ ರಕ್ಷಣೆಗಾಗಿ ಈ ಪಟ್ಟಣವನ್ನು ಬಿಟ್ಟು ದೇಶ ಸಂಚಾರ ಮಾಡಬೇಕಾಗುತ್ತದೆ ಎಂದು ನುಡಿಯುತ್ತಾನೆ. ಮಾಳಪ್ಪನ ಮಾತೆಂದರೆ ಎಲ್ಲರಿಗೂ ವೇದವಾಕ್ಯವಾಗಿತ್ತು. ಎಲ್ಲದಕ್ಕೂ ದೇವರಿದ್ದಾನೆ. ಅದಂಗೆ ಆಗಲಿ ಎಂದು ಕಾಲ ಕಳೆಯುತ್ತಿರುತ್ತಾರೆ.

ಮಾಳಪ್ಪ ನುಡಿದಂತೆ ಮುಂದೊಂದು ದಿನ ಬರಗಾಲ ಬೀಳುತ್ತದೆ. ಪಟ್ಟಣದಲ್ಲಿ ಅನ್ನ ನೀರಿಗಾಗಿ ಹಾಹಾಕಾರ ಏಳುತ್ತದೆ. ಬಹಳಷ್ಟು ಜನ ಮನೆಮಠಗಳನ್ನು ತೊರೆದು ದೇಶಾಂತರ ಹೋಗುತ್ತಾರೆ. ಇತ್ತ ತುಕ್ಕಪ್ಪರಾಯ ಮತ್ತು ಸೋಮರಾಯ ಗೌಡತಿಯನ್ನು ಬಿಟ್ಟು ತಮ್ಮ ಏಳುನೂರು ಗೋವುಗಳ ರಕ್ಷಣೆಗಾಗಿ ದೇಶಾಂತರ ಹೋಗಬೇಕೆಂದು ನಿಶ್ಚಯಿಸುತ್ತಾರೆ. ಜಕ್ಕಪ್ಪ, ಮಾಳಪ್ಪ

ಚಿಕ್ಕವರಾದುದರಿಂದ ಅವರನ್ನು ನೋಡಿಕೊಳ್ಳಲು ಅಮೃತಬಾಯಿಯನ್ನು ಮನೆಯಲ್ಲಿ ಬಿಟ್ಟು ಕಣ್ಣವ್ವನನ್ನು ಕರೆದುಕೊಂಡು ಹೋಗುತ್ತಾರೆ ಇಲ್ಲಿ ತಾಯಿ ಅಮೃತಬಾಯಿ ಅವರಿಬ್ಬರನ್ನು ಒಂದು ಕೋಣೆಯಲ್ಲಿ ಹಾಕಿ ಕೀಲಿ ಹಾಕಿರುತ್ತಾಳೆ. ವಿಷಯ ತಿಳಿದ ಜಕ್ಕಪ್ಪ ಮತ್ತು ಮಾಳಪ್ಪ ತಮ್ಮ ಮಹಿಮೆಯಿಂದ ಕೀಲಿಯನ್ನು ತೆಗೆದು ಹೊರಬಂದು ತಂದೆಯ ಜೊತೆಗೆ ಹೋಗಲು ಸಿದ್ಧರಾಗುತ್ತಾರೆ ಗೋವುಗಳ ವಿಷಯ ಬಂದಾಗ ತಮ್ಮ ವೈಯಕ್ತ ಕಷ್ಟ ನಷ್ಟವನ್ನು ಮರೆತು ಅವುಗಳ ರಕ್ಷಣೆಗೆ ಎಲ್ಲರೂ ಮುಂದಾಗುತ್ತಾರೆ. ಪಟ್ಟು ಹಿಡಿದು ಇವರಿಬ್ಬರು ಹಸುಗಳ ಹಿಂಡಿನೊಂದಿಗೆ ದೇಶಾಂತರ ಹೋಗುತ್ತಾರೆ. ಮತ್ತು ಗೋವುಗಳ ರಕ್ಷಣೆ ಮಾಡುತ್ತಿರುತ್ತಾರೆ. ಗೋವುಗಳ ಹಿಂಡಿನೊಂದಿಗೆ ಕಾಡು ಮೇಡು ಅಲೆಯುತ್ತ ನೀರಿದ್ದಲ್ಲಿ ಠಿಕಾಣಿ ಹೂಡಿ ಸ್ವಲ್ಪ ದಿನ ಇದ್ದು. ನಂತರ ಮತ್ತೊಂದು ಸ್ಥಳಕ್ಕೆ ಹೋಗುತ್ತಿದ್ದರು. ಒಳ್ಳೆಯದಾಗುವಂತೆ ಹರಸುತ್ತಿದ್ದರು. ಒಂದೊಂದು ಕಡೆ ಗ್ರಾಮಸ್ಥರ ಮೇಲೆ ಕೆಲವು ದುಷ್ಟಶಕ್ತಿಗಳು ದಬ್ಬಾಳಿಕೆ ನಡೆಸುತ್ತಿದ್ದವು. ಅಂಥವನ್ನೆಲ್ಲ ಮಾಳಿಂಗರಾಯ ಮಟ್ಟ ಹಾಕುತ್ತಿದ್ದನು.

ಹಲವಾರು ಗ್ರಾಮಗಳನ್ನು ಸುತ್ತಾಡಿ. ಅನೇಕ ಸಾಮಾಜಿಕ ಅಭಿವೃದ್ಧಿ ಕಾರ್ಯಗಳನ್ನು ಮಾಡಿ ಕೊನೆಗೆ ನೀರು, ಮೇವು ಸಮೃದ್ಧಿಯಿಂದ ಕೂಡಿದ ಭೀಮ ನದಿಯ ದಡಕ್ಕೆ ಬರುತ್ತಾರೆ. ಅಲ್ಲಿಯೇ ಗುಡ್ಡದಲ್ಲಿ ಸೋನಾರಿ ಸಿದ್ಧರ ಆಶ್ರಮವಾಗುತ್ತದೆ. ಅವರ ಸೇವೆ ಮಾಡುತ್ತ ಹಸುಗಳನ್ನು ಮೇಯಿಸುತ್ತ ಇರುತ್ತಾರೆ.

ಅದೊಂದು ಏಳುನೂರು ಜನ ಬೇಡರು ವಾಸಿಸುವ ಸ್ಥಳ ಅಲ್ಲಿ ಅವರದೇ ದರಬಾರು. ಅವರು ಹೇಳಿದಂತೆಯೇ ನಡೆಯುತ್ತಿತ್ತು. ಅಲ್ಲಿಗೆ ಬಂದ ಮಾಳಿಂಗರಾಯನ ಏಳುನೂರು ಗೋವುಗಳ ಮೇಲೆ ಅವರ ಕಣ್ಣು ಬೀಳುತ್ತದೆ. ಹೇಗಾದರೂ ಮಾಡಿ ಆ ಗೋವುಗಳನ್ನು ಕಳವು ಮಾಡಬೇಕೆಂದು ಹೊಂಚು ಹಾಕುತ್ತಾರೆ.

ಅದರಲ್ಲಿ ಒಬ್ಬ ವ್ಯಕ್ತಿ ಬೇಡ ಜಂಗಮನ ವೇಷತೊಟ್ಟು ಕೈಯಲ್ಲಿ ಕೋಲು ಹಿಡಿದು ಕುಂಟನಂತೆ ನಟಿಸುತ್ತ ತುಕ್ಕಪ್ಪರಾಯ ಮತ್ತು ಸೋಮರಾಯ ಇದ್ದಲ್ಲಿಗೆ ಬರುತ್ತಾನೆ.

ಬಂದವನೇ ಸೋಮರಾಯನನ್ನು ಕುರಿತು-

ನೀವು ಹಾಲುವಂತದವರು. ನಿಮ್ಮಲ್ಲಿರುವ ಬಿಲ್ಲು ಬಾಣ ಭರ್ಜಿಗಳನ್ನು ನೋಡಿದರೆ ಕ್ಷತ್ರಿಯರು ಉಪಯೋಗಿಸುವ ಶಸ್ತ್ರಾಸ್ತ್ರಗಳಂತೆ ಇವೆ. ಇವೆಲ್ಲ ನಿಮಗೇಕೆ ಬೇಕು? ಎಂದು ಕೇಳುತ್ತಾನೆ.

ಅದಕ್ಕೆ ಸೋಮರಾಯ-ನಾವು ಕ್ಷತ್ರಿಯರಲ್ಲದಿದ್ದರೂ ನಮ್ಮಲ್ಲಿರುವ ಈ ಸುಖದ ಕೊಳಲು, ದುಃಖದ ಕೊಳಲು ಈ ಬಿಲ್ಲು ಬಾಣಗಳನ್ನು ಈ ಗೋವುಗಳ ರಕ್ಷಣೆಗಾಗಿ ಹೊಂದಿದ್ದೇವೆ ಎಂದು ಉತ್ತರಿಸುತ್ತಾನೆ.

ಗೋವುಗಳನ್ನು ಮೇಯಿಸುವ ಗುಡ್ಡಗಾಡು ಭಯಂಕರವಾಗಿರುತ್ತದೆ. ಕಾಡಿನಿಂದ ಬರುವ ಕೆಲವು ದುಷ್ಟ ಪ್ರಾಣಿಗಳು ನಮ್ಮ ಹಸುಗಳ ಮೇಲೆ ಆಕ್ರಮಣ ಮಾಡುತ್ತವೆ. ಅಂಥ ದುಷ್ಟಪ್ರಾಣಿಗಳನ್ನು ಸಂಹರಿಸಿ ಹಸುಗಳನ್ನು ರಕ್ಷಿಸಲು ಈ ಶಸ್ತ್ರಾಸ್ತ್ರಗಳು ಸಹಕಾರಿಯಾಗುತ್ತವೆ.

ನಮ್ಮ ಗೋವುಗಳಿಗೆ ಮನರಂಜಿಸಲು ಮತ್ತು ತಪ್ಪಿಸಿಕೊಂಡ ಗೋವುಗಳನ್ನು ಒಂದೆಡೆ ಸೇರಿಸಲು ಈ ಸುಖದ ಕೊಳಲನ್ನು ಬಳಸುತ್ತೇವೆ. ಒಂದು ವೇಳೆ ನಮ್ಮ ತಂಡ ಯಾವುದೇ ರೀತಿಯ ಸಂಕಷ್ಟಕ್ಕೆ ಸಿಲುಕಿದಾಗ ಅದು ಮತ್ತೊಬ್ಬರಿಗೆ ಗೊತ್ತಾಗಬೇಕಾದರೆ ದುಃಖದ ಕೊಳಲನ್ನು ಊದುತ್ತೇವೆ. ಆಪತ್ಕಾಲದಲ್ಲಿ ಈ ಎಲ್ಲ ವಸ್ತುಗಳು ಒಂದಿಲ್ಲ ಒಂದು ರೀತಿಯಲ್ಲಿ ಉಪಯೋಗವಾಗುತ್ತವೆ ಎಂದು ಹೇಳುತ್ತಾನೆ.

ನಾವೆಲ್ಲ ಈ ಬಿಲ್ಲುಗಾರಿಕೆಯಲ್ಲಿ ಪ್ರವೀಣರಾದವರು. ನಾನು ಒಂದೇ ಬಿಲ್ಲಿನಿಂದ ಏಕಕಾಲಕ್ಕೆ ಏಳುನೂರು ತಲೆಗಳನ್ನು ಕಡಿದು ಹಾಕಬಲ್ಲೆವು ಎಂದು ಸೋಮರಾಯ ನುಡಿಯುತ್ತಾನೆ.

ಈ ಪರಾಕ್ರಮವನ್ನು ಕೇಳಿದ ಬೇಡ ಹೌಹಾರುತ್ತಾನೆ. ತಾವೇ ಪ್ರವೀಣರು ಎಂದುಕೊಂಡಿದ್ದ ಅವರಿಗೆ ಸೋಮರಾಯನ ವಿಚಾರ ಕೇಳಿ ನಡಕ ಉಂಟಾಗುತ್ತದೆ. ಆದರೂ ಅಲ್ಪ ಸ್ವಲ್ಪ ಧೈರ್ಯ ತಂದುಕೊಂಡು-

ನನಗೂ ಒಂದು ವಿದ್ಯೆ ಬರುತ್ತದೆ. ನಾನು ಒಂದೇ ಹಳ್ಳದಿಂದ ಏಕಕಾಲಕ್ಕೆ ಏಳುನೂರು ಪಾರಿವಾಳಗಳನ್ನು ಹಾರಿಸುವ ಕಲೆ ನನಗೆ ಗೊತ್ತಿದೆ ಎಂದು ಹೇಳಿ, ಒಂದು ಹಳ್ಳ ತೆಗೆದು ಏಳನೂರು ಪರಿವಾಳಗಳನ್ನು ಹಾರಿಸುತ್ತಾನೆ. ಪ್ರತಿಯಾಗಿ ಏಳನೂರು ಪಾರಿವಾಳಗಳ ತಲೆಯನ್ನು ಏಕಕಾಲಕ್ಕೆ ಕತ್ತರಿಸುವಂತೆ ಸೋಮರಾಯನಿಗೆ ಅ ಬೇಡ ಸವಾಲು ಹಾಕುತ್ತಾನೆ.

ಆ ವಿದ್ಯೆಯಲ್ಲಿ ಪ್ರವೀಣನಾಗಿದ್ದ ಸೋಮರಾಯ ಬಿಲ್ಲನ್ನು ಹೆಗಲಿಗೆ ಏರಿಸಿ ಅದಕ್ಕೆ ಬಾಣವನ್ನು ಹೂಡಿ ಸಾಲಾಗಿ ಕುಳಿತ ಪಾರಿವಾಳ ತಲೆ ಕತ್ತರಿಸಿ ಹಾಕುತ್ತಾನೆ. ಅ ಬಿಲ್ವಿದ್ಯೆಯ ಪ್ರಾವೀಣ್ಯತೆ ಒಂದೆಡೆ ಅವನಿಗೆ ಖುಷಿ ಕೊಟ್ಟರೆ, ಮತ್ತೊಂದೆಡೆ, ನಮ್ಮ ಹುಸಿ ಅಹಂಕಾರಕ್ಕೆ ಆ ಮುಗ್ಧ ಪಕ್ಷಿಗಳು ಬಲಿಯಾದವಲ್ಲ ಎಂದು ಮನದಲ್ಲಿಯೇ ಮರಗುತ್ತಾನೆ.

ನನ್ನ ವಿದ್ಯೆಯನ್ನು ಪ್ರದರ್ಶಿಸಲು ಈ ಏಳುನೂರು ಹಕ್ಕಿಗಳನ್ನು ಕೊಂದ ಪಾಪ ನನಗೆ ತಗಲುತ್ತದೆ ಎಂದು ಸಂಕಟಪಡುತ್ತಾನೆ. ಕಷ್ಟಕಾಲದಲ್ಲಿ ತನ್ನ ಸಹಾಯಕ್ಕೆ ಬರುವ ಗುರು ಸೋನಾರ ಸಿದ್ಧರನ್ನು ಮನದಲ್ಲಿಯೇ ಸ್ಮರಿಸುತ್ತಾನೆ. ಭಕ್ತನ ಕೋರಿಕೆಯನ್ನು ಅರಿತ ಸೋನಾರ ಸಿದ್ಧ ಪ್ರತ್ಯಕ್ಷನಾಗಿ ವಿಷಯ ಏನೆಂದು ತಿಳಿದುಕೊಳ್ಳುತ್ತಾನೆ. ಹಕ್ಕಿಗಳನ್ನು ಕೊಂದ ವಿಷಯ ತಿಳಿದು, ಪರಿಹಾರವಾಗಿ ಜೀವಬರುವ ಭಸ್ಮವನ್ನು ಕೊಡುತ್ತಾನೆ. ಆ ಭಸ್ಮವನ್ನು ಪಾರಿವಾಳಗಳ ಮೇಲೆ ಚೆಲ್ಲಿದಾಗ ಅವುಗಳಿಗೆ ಜೀವ ಬಂದು ಹಾರಿಹೋಗುತ್ತವೆ. ಅ ಸೋಜಿಗವನ್ನು ನೋಡಿ ಬೇಡ ದಿಗ್ಭ್ರಮೆಗೊಳ್ಳುತ್ತಾನೆ.

ಸೋದರರಿಬ್ಬರೂ ಕೂಡಿದ್ದಾಗ ನನ್ನ ಆಟ ನಡೆಯುವುದಿಲ್ಲ ಇವರಿಬ್ಬರು ಅಗಲಿದ ಸಂದರ್ಭವನ್ನು ನೋಡಿ ಈ ಏಳುನೂರು ಹಸುಗಳನ್ನು ಕಳವು ಮಾಡಬೇಕೆಂದು ನಿಶ್ಚಯಿಸಿ ಹೋಗುತ್ತಾನೆ. ಈ ಘಟನೆಯನ್ನೆಲ್ಲ ಇತರ ಬೇಡರ ಪಡೆಗೆ ಸವಿವರನಾಗಿ ತಿಳಿಸುತ್ತಾನೆ.

೨

ತುಕ್ಕಪ್ಪರಾಯ ಸೋಮರಾಯ ಇಬ್ಬರು ಯಾವತ್ತೂ ಅಗಲಿರಲಿಲ್ಲ. ಆದರೆ ಒಂದು ದಿನ ಮಾತ್ರ ಅಂಥ ಕಾಲ ಬಂತು. ಆ ದಿನ ತುಕ್ಕಪ್ಪರಾಯ ತಮ್ಮ ಸೋಮರಾಯನಿಗೆ ಇವತ್ತು ನೀನು ಹಟ್ಟಿಯಲ್ಲಿರು. ನಾನೊಬ್ಬನೆ ಆಕಳುಗಳನ್ನು ಮೇಯಿಸಿಕೊಂಡು ಬರುತ್ತೇನೆ ಎಂದು ಹೇಳಿ ಆಕಳುಗಳನ್ನು ಹೊಡೆದುಕೊಂಡು ಹೋಗುತ್ತಾನೆ. ಅಕ್ಕ ಪಕ್ಕದ ಅಡವಿಗಳಲ್ಲೆಲ್ಲ ಆಕಳುಗಳನ್ನು ಮೇಯಿಸಿ ಭೀಮಾ ನದಿಯ ದಡಕ್ಕೆ ಬಂದು ಆಕಳುಗಳಿಗೆ ನೀರು ಕುಡಿಯಲು ಬಿಟ್ಟು ಸ್ವಲ್ಪ ಹೊತ್ತು ಅಲ್ಲೇ ಒಂದು ಹುತ್ತಿಗೆ ತಲೆಕೊಟ್ಟು ಮಲಗುತ್ತಾನೆ.

ಇದಕ್ಕಾಗಿಯೇ ಕಾಯುತ್ತಿದ್ದ ಬೇಡರ ಪಡೆಯ ದಂಡು ಬಂದು ಆಕಳುಗಳನ್ನು ಹಿಡಿಯುತ್ತಾರೆ. ಗಾಬರಿಗೊಂಡ ಆಕಳುಗಳು ಚೀರಾಡುತ್ತವೆ. ಅವುಗಳ ಚೀರಾಟ ಕೇಳಿದ ತುಕ್ಕಪ್ಪರಾಯ ಎಚ್ಚರವಾಗುತ್ತಾನೆ. ಬೇಡರ ಈ ನೀಚಕೆಲಸವನ್ನು ನೋಡಿ ಸಿಟ್ಟುಬರುತ್ತದೆ. ಕಣ್ಣಿಂದಲೇ ಬೆಂಕಿ ಕಾರುವಂತೆ ಬಿಲ್ಲನ್ನು ಹೆಗಲಿಗೆ ಏರಿಸಿ ಬಾಣಗಳನ್ನು ಒಂದೊಂದಾಗಿ ವೈರಿಗಳ ಮೇಲೆ ಬಿಡುತ್ತಾನೆ.

ಬಿಲ್ವಿದ್ಯೆಯನ್ನು ಬಲ್ಲವರಾದ ಬೇಡರು ಸಹ ಈತ ಬಿಟ್ಟ ಬಾಣಗಳಿಂದ ತಪ್ಪಿಸಿಕೊಳ್ಳುತ್ತಾರೆ. ಇವನಲ್ಲಿರುವ ಎಲ್ಲ ಬಾಣಗಳು ಮುಗಿದುಹೋಗುತ್ತವೆ. ಕೊನೆಗೆ ಒಂದೇ ಒಂದು ಬಾಣ ಮಾತ್ರ ಉಳಿದಿರುತ್ತದೆ. ಇದೊಂದು ಬಾಣವೂ ಅವರನ್ನು ಸಾಯಿಸದಿದ್ದರೆ, ಆ ದುಷ್ಟಜನ ನನ್ನನ್ನು ಸುಮ್ಮನೇ ಬಿಡುವುದಿಲ್ಲ ಎಂದುಕೊಂಡು, ಆ ಬಾಣದಿಂದಲೇ ತನ್ನ ಎದೆಗೆ ಚುಚ್ಚಿಕೊಂಡು ಕೆಳಗೆ ಬೀಳುತ್ತಾನೆ. ಅಷ್ಟೊತ್ತಿಗೆ ಬೇಡರ ಪಡೆ ಕೆಲವು ಗೋವುಗಳನ್ನು ಹಾರಿಸಿಕೊಂಡು ಹೋಗಿರುತ್ತಾರೆ.

ಹಿಂಡಿನಲ್ಲಿದ್ದ ಶಿವನ ಸಲಗದ ಗೂಳಿಯೊಂದು ಓಡಿ ಹಟ್ಟಿಗೆ ಬರುತ್ತದೆ. ಅದರ ಮೈಯೆಲ್ಲ ರಕ್ತವಾಗಿರುತ್ತದೆ ಹಟ್ಟಿಯಲ್ಲಿದ್ದ ಕಣ್ಣವ್ವ ರಕ್ತಸಿಕ್ತ ಈ ಗೂಳಿಯನ್ನು

ನೋಡಿ ಏನೋ ನಡೆಯಬಾರದ ದುರಂತ ನಡೆದುಹೋಗಿದೆ ನಮ್ಮ ಭಾವನಿಗೆ ಏನೋ ಆಗಿದೆ ಎಂದು ಅಳುತ್ತಾ ಅಲ್ಲೇ ಮಲಗಿದ್ದ ಗಂಡನನ್ನು ಎಬ್ಬಿಸುತ್ತಾಳೆ. ಎಚ್ಚೆತ್ತ ಸೋಮರಾಯ ಗೂಳಿಯ ಆಕಾರವನ್ನು ನೋಡಿ ಏನೋ ದೊಡ್ಡ ದುರಂತವೇ ನಡೆದಿದೆ ಎಂದುಕೊಂಡು ಆ ಗೂಳಿಯೊಂದಿಗೆ ಘಟನಾಸ್ಥಳಕ್ಕೆ ಬರುತ್ತಾನೆ.

ಸಾಯುವ ಸ್ಥಿತಿಯಲ್ಲಿದ್ದ ತುಕ್ಕಪ್ಪರಾಯ ಸೋಮರಾಯನಿಗೆ ನೀನು ನಿಜವಾದ ನನ್ನ ತಮ್ಮನೇ ಅಗಿದ್ದರೆ ಅ ಬೇಡರು ಕಳವು ಮಾಡಿದ ನಮ್ಮ ಏಳುನೂರು ಆಕಳುಗಳನ್ನು ನನ್ನ ಮುಂದೆ ತಂದು ನಿಲ್ಲಿಸು ಎಂದು ನುಡಿಯುತ್ತಾನೆ. ಅಣ್ಣನ ಮಾತನ್ನು ಸವಾಲಾಗಿ ಸ್ವೀಕರಿಸಿದ ಸೋಮರಾಯ ಅಲ್ಲಿಂದ ನೇರವಾಗಿ ಬೇಡರ ಹಟ್ಟಿಯ ಹತ್ತಿರದಲ್ಲಿಯೇ ನಿಂತು ದುಃಖದ ಕೊಳಲನ್ನು ಊದುತ್ತಾ ದುಃಖದ ರಾಗವನ್ನು ನುಡಿಸುತ್ತಾನೆ. ಈ ನಾದ ಕೇಳಿದ ಎಲ್ಲ ಆಕಳುಗಳು ಓಡಿ ಸೋಮರಾಯನಲ್ಲಿಗೆ ಬರುತ್ತವೆ. ಅವುಗಳನ್ನು ಹೊಡೆದುಕೊಂಡು ಬರುವಷ್ಟರಲ್ಲಿ ತುಕ್ಕಪ್ಪರಾಯನ ಪ್ರಾಣಪಕ್ಷಿ ಹಾರಿಹೋಗಿರುತ್ತದೆ. ಅಲ್ಲಿಯೇ ತುಕ್ಕಪ್ಪರಾಯನ ಸಮಾಧಿ ಮಾಡುತ್ತಾರೆ. ಸಮಾಧಿ ಹತ್ತಿರ ಲಿಂಗ ಕಾಣುತ್ತದೆ. ಲಿಂಗಕ್ಕೆ ವಿಭೂತಿ, ಮೇಲೆ ರುದ್ರಾಕ್ಷಿ ನೋಡಿ ಮನಸ್ಸಿನಲ್ಲಿಯೇ ಧನ್ಯನೆಂದು ನಮಸ್ಕರಿಸುತ್ತಾನೆ. ವಿಷಯ ತಿಳಿದ ಸೋನಾರ ಸಿದ್ಧರು ಅಲ್ಲಿಗೆ ಬರುತ್ತಾರೆ. ಊರಲ್ಲಿ ಅಮೃತಬಾಯಿ ಪ್ರಾಣ ಬಿಡುತ್ತಿರುವ ವಿಷಯ ಸೋಮರಾಯನಿಗೆ ತಿಳಿಸುತ್ತಾರೆ. ದುಃಖ ಇಮ್ಮಡಿಗೊಳ್ಳುತ್ತದೆ. ಇಷ್ಟೆಲ್ಲ ದುರಂತಕ್ಕೆ ಕಾರಣವಾದ ಆ ಸ್ಥಳವನ್ನು ಬಿಟ್ಟು ಮಕ್ಕಳೊಂದಿಗೆ ಸೊಲ್ಲಾಪುರಕ್ಕೆ ಹೋಗುತ್ತಾನೆ.

೮

ಅಷ್ಟೊತ್ತಿಗಾಗಲೇ ಮಾಳಿಂಗರಾಯ ಮತ್ತು ಜಕ್ಕಪ್ಪರಾಯ ದೊಡ್ಡವರಾಗಿರುತ್ತಾರೆ. ಹಿಂದೆ ನಡೆದ ಘಟನೆಗಳೆಲ್ಲ ಸೋಮರಾಯನ ಮನಸ್ಸಿನ ಮೇಲೆ ಕೆಟ್ಟ ಪರಿಣಾಮ ಉಂಟುಮಾಡಿರುತ್ತವೆ. ಆ ಘಟನೆಗಳನ್ನು ಮರೆಯುವ ಸಲುವಾಗಿ ಒಂದಷ್ಟು ದಿನ ಸೊಲ್ಲಾಪುರದಲ್ಲಿಯೇ ವಸತಿ ಮಾಡುತ್ತಾರೆ.

ಮನಸ್ಸು ಸ್ಥಿರವಿದ್ದರೂ ಘಟನೆಯ ನೆನಪು ಮಾತ್ರ ಸಂಪೂರ್ಣವಾಗಿ ಅಳಿಸಿ ಹೋಗಿರಲಿಲ್ಲ. ಸೋದರರಿಬ್ಬರು ಯಾವತ್ತು ಇನ್ನೊಬ್ಬರಿಗೆ ಅನ್ಯಾಯ ಮಾಡಿದವರಲ್ಲ, ಎರಡು ಬಗೆದವರಲ್ಲ. ಹಗಲಿರುಳು ರಾಜ್ಯದ ಉದ್ಧಾರಕ್ಕಾಗಿ, ಜನಸಾಮಾನ್ಯರ ಸುಖ, ಶಾಂತಿ, ನೆಮ್ಮದಿಗಾಗಿ ದುಡಿದವರ ಮೇಲೆಯೇ ಈ ರೀತಿ ಅನ್ಯಾಯ ಮಾಡುವುದೆ? ಎಂಬ ಪ್ರಶ್ನೆ ಅವನನ್ನು ಕಾಡುತ್ತಿತ್ತು.

ರಾಮ ಲಕ್ಷ್ಮಣರಂತೆ, ನಕುಲ ಸಹದೇವರಂತೆ ಇದ್ದ ನಮ್ಮನ್ನು, ಆ ಬೇಡರ ಪಡೆ ಅಗಲಿಸಬಹುದೆ? ಇಂಥ ಆಲೋಚನೆಗಳು ತಲೆಯಲ್ಲಿ ಬರುತ್ತಲೇ ಇರುತ್ತವೆ. ಇದೇ ಚಿಂತೆಯಲ್ಲಿ ಬುದ್ಧಿಭ್ರಮಣೆಗೆ ಒಳಗಾಗುತ್ತಾನೆ.

ತಂದೆಯ ಮನಸ್ಸಿನ ಚಂಚಲತೆಯನ್ನು ಕಂಡ ಜಕ್ಕಪ್ಪ ಮಾಳಿಂಗರಾಯನನ್ನು ಒಂದು ದಿನ ನೇರವಾಗಿ ಕೇಳಿಯೇ ಬಿಡುತ್ತಾನೆ.

ನಿನಗೇನಾಗಿದೆ ಅಪ್ಪ ಕಳೆದ ಒಂದು ವಾರದಿಂದ ನೀನು ಸರಿಯಾಗಿ ಊಟ ಮಾಡುತ್ತಿಲ್ಲ, ನಿದ್ದೆಮಾಡುತ್ತಿಲ್ಲ, ಯಾವತ್ತೂ ಯಾವುದೋ ಒಂದು ಚಿಂತೆಯಲ್ಲಿರುವಂತೆ ಮಂಕಾಗಿ ಕುಳಿತಿರುತ್ತಿ' ಎನ್ನುತ್ತಾರೆ.

ಮಕ್ಕಳ ಮಾತು ಕೇಳಿದ ಸೋಮರಾಯ 'ಹಾಗೇನಿಲ್ಲ. ಏನೋ ಒಂದಷ್ಟು ತಲೆಬೇನೆ. ನಾನು ಚೆನ್ನಾಗಿಯೇ ಇದ್ದೇನೆ. ನೀವು ಹೋಗಿ ಎಂದು ಅವರನ್ನು ಅಲ್ಲಿಂದ ಕಳುಹಿಸುವ ಪ್ರಯತ್ನ ಮಾಡುತ್ತಾನೆ.

ಮಕ್ಕಳು ಮಾತ್ರ ಅಲ್ಲಿಂದ ಕದಲದೆ ಇಲ್ಲಪ್ಪ ಹೇಳಿಕೊಳ್ಳದ ಯಾವುದೋ ಒಂದು ಗಾಢವಾದ ಚಿಂತೆ ನಿನ್ನ ಮನಸ್ಸನ್ನು ಕೊರೆಯುತ್ತಿದೆ. ಅದನ್ನು ನಮ್ಮ ಮುಂದೆ ಹೇಳಿಕೊಳ್ಳಲೇ ಬೇಕು. ನೀನು ಹೇಳದಿದ್ದರೆ ನಮ್ಮ ಮೇಲೆ ಆಣೆ, ನಮ್ಮ ತಾಯಿ ಮೇಲಾಣೆ' ಎಂದು ಇಕ್ಕಟ್ಟಿಗೆ ಸಿಕ್ಕಿಸುತ್ತಾರೆ.

ಗೊಂದಲಕ್ಕೆ ಬಿದ್ದ ಸೋಮರಾಯ ತನ್ನ ಮನಸ್ಸನ್ನು ತಿನ್ನುತ್ತಿದ್ದ ಬೇಡರ ದಾಳಿ, ಅಣ್ಣ ಅತ್ತಿಗೆ ಸಾವು, ಅವರ ಅಗಲಿಕೆಯ ವೇದನೆಯಿಂದ ತಾನು ಪಡುತ್ತಿರುವ ಸಂಕಷ್ಟ. ಯಾವುದನ್ನ ಹೇಳಬೇಕು? ಈಗ ಹೇಳುವುದು ಒಳಿತಲ್ಲವೆಂದು ಸುಮ್ಮನಾಗುತ್ತಾನೆ. ಇದ್ದ ವಿಷಯ ನೇರವಾಗಿ ಮಕ್ಕಳೆದುರು ಹೇಳಿಬಿಟ್ಟರೆ ಒರಟು ಬುದ್ಧಿಯ ಮಕ್ಕಳು ದುಡಿಸಿ ಬೇಡರ ಮೇಲೆ ದಾಳಿ ಮಾಡಿದಾಗ ಅಣ್ಣನ ಸ್ಥಿತಿ ಇವರಿಗೂ ಆದರೆ? ಎಂಬ ಅಳುಕು ಆತನ ಮನಸ್ಸಿನಲ್ಲಿತ್ತು. ಹೀಗೆಂದು ಮನದಲ್ಲಿಯೇ ಯೋಚಿಸಿ, ಮಕ್ಕಳನ್ನು ಸಮಾಧಾನ ಪಡಿಸುತ್ತ-

ನೀವು ಅಂದುಕೊಂಡಂತೆ ಹಾಗೇನೂ ಇಲ್ಲ. ಯಾವುದಕ್ಕೂ ಕಾಲ ಕೂಡಿ ಬರಬೇಕು. ಅಂಥ ಸಮಯ ಬಂದಾಗ ನಾನೇ ನಿಮ್ಮನ್ನು ಕರೆದು ಹೇಳುತ್ತೇನೆ ಎಂದು ಹೇಳಿ ದನ ಕಾಯಲು ಕಳುಹಿಸುತ್ತಾನೆ.

ಸೊಲ್ಲಾಪುರದ ವಾಸವು ಸೋಮರಾಯನಿಗೆ ಸಾಕಾಗುತ್ತದೆ. ಅಲ್ಲಿಂದ ಚಿಕ್ಕ ಪುಟ್ಟ ಗ್ರಾಮಗಳನ್ನು ಹಾಯ್ದು ನಿಲಂಗ ಹತ್ತಿರದ ಶಾಡಬಾಬಾನ ಗುಡ್ಡದಲ್ಲಿ ಬಂದು ನೆಲೆ ನಿಲ್ಲುತ್ತಾರೆ.

ಸೋಮರಾಯನ ತಲೆಯಲ್ಲಿ ಒಂದು ಯೋಚನೆ ಹೊಳೆಯುತ್ತದೆ. ಮಕ್ಕಳನ್ನು ಹೀಗೆ ದನ ಕಾಯಲು ಬಿಟ್ಟರೆ ವೈರಿಗಳನ್ನು ಸದೆಬಡಿಯಲು ಸಾಧ್ಯವೆಂದು ಮನದಲ್ಲಿಯೇ ಅಂದುಕೊಂಡು ಸೋನಾರಿಸಿದ್ಧ ಗುರುಗಳಿಂದ ಮಕ್ಕಳಿಗೆ ವಿದ್ಯೆ ಕಲಿಸಬೇಕೆಂದು ನಿಶ್ಚಯಿಸುತ್ತಾನೆ.

ಶಾಡಬಾಬಾನ ಗುರುವು ಕಾಡು ಬೆಟ್ಟಗಳಿಂದ ಕೂಡಿದ ಸ್ಥಳವಾಗಿತ್ತು. ಈ ಸ್ಥಳದಲ್ಲಿಯೇ ಸಿದ್ಧರು ನೆಲೆಸಿದ್ದರು. ಈ ಸಿದ್ಧರು ಪಶುಪಾಲಕರಿಗೆ ಕಷ್ಟ ಕಾಲದಲ್ಲಿ ಸಹಾಯ ಮಾಡುತ್ತಿದ್ದರು. ಹೀಗಾಗಿ ಪಶುಪಾಲಕರೂ ಸಹ ಹೆಜ್ಜೆ ಹೆಜ್ಜೆಗೂ ಈ ಸಿದ್ಧರ ಸಮೂಹವನ್ನು ಸ್ಮ ರಿಸುತ್ತಿದ್ದರು.

ಸೋಮರಾಯ ಅಂದುಕೊಂಡಂಗೆ ಜಕ್ಕಪ್ಪರಾಯ ಮಾಳಿಂಗರಾಯ ವಿದ್ಯೆ ಸೋನಾರ ಸಿದ್ಧರ ಆಶ್ರಮದಲ್ಲಿಯೇ ಆರಂಭವಾಗುತ್ತದೆ. ಈ ಸಿದ್ಧರು ಗೋರಖ ವಿದ್ಯೆಯ ಜೊತೆಗೆ ಅರವತ್ತನಾಲ್ಕು ಇನ್ನಿತರ ವಿದ್ಯೆಗಳನ್ನು ಸಹ ಬಲ್ಲವರಾಗಿದ್ದರು. ಬಾಣ ಪ್ರಯೋಗ ಮಾಡುವುದು. ವೈರಿಗಳ ಬಾಣವನ್ನು ತಪ್ಪಿಸಿಕೊಳ್ಳುವುದು, ಮಳೆಬರಿಸುವುದು, ತಪಸ್ಸು ಮಾಡುವುದು, ಆಧ್ಯಾತ್ಮ ಸಧನೆ ಇಂಥ ಹಲವಾರು ವಿದ್ಯೆಗಳನ್ನು ಹೇಳಿಕೊಡುತ್ತಿದ್ದರು.

ನಾಗಬೆತ್ತವೇ ಈ ಸಿದ್ಧರ ಸಾಧನೆಯ ಮೂಲವಾಗಿತ್ತು. ಅದು ಯಾವುತ್ತೂ ಅವರ ಕೈಯಲ್ಲಿಯೇ ಇರುತ್ತಿತ್ತು. ಅದಿಲ್ಲದೇ ಅವರು ಎಲ್ಲಿಯೂ ಸುತ್ತುತ್ತಿರಲಿಲ್ಲ. ವಿದ್ಯೆ ಕಲಿಯಲು ಬರುವ ವಿದ್ಯಾರ್ಥಿಗಳು ಸಹ ಈ ನಾಗಬೆತ್ತ ಹೊಂದಿರಬೇಕಾಗುತ್ತಿತ್ತು. ಅದು ಮೈಮನ ಶುದ್ಧವಿದ್ದವರಿಗೆ ಮಾತ್ರ ಒಲಿಯುತ್ತಿತ್ತು.

ಮಾಳಿಂಗರಾಯನಿಗೆ ತಾನು ಚಿಕ್ಕವನಿರುವಾಗಲೇ ಆದಿಶೇಷ ಇವನಿಗೆ ಒಲಿದಿದ್ದನು. ಆ ನಾಗಬೆತ್ತ ಇಂದು ಇವನ ಸಹಾಯಕ್ಕೆ ಬಂತು. ಕೇವಲ ಮೂರು ತಿಂಗಳಲ್ಲಿಯೇ ಸಿದ್ಧರು ಹೇಳಿಕೊಟ್ಟ ಎಲ್ಲ ವಿದ್ಯೆಯನ್ನು ಇಬ್ಬರೂ ಕಲಿತರು. ಗೋರಖವಿದ್ಯೆಯ ಸಹಾಯದಿಂದ ಹಲವಾರು ಪವಾಡಗಳನ್ನು ಮಾಡುತ್ತಾರೆ. ಮೋಡಿ, ಮಾಟ, ಮಂತ್ರ ದಂಧೆ ಕೈ ಚಳಕಕ್ಕೆ ಬೆರಗಾಗಿ ಹಲವಾರು ಜನ ಪಶುಪಾಲಕರು ಇವರ ಶಿಷ್ಯರಾಗುತ್ತಾರೆ. ಜಕ್ಕಪ್ಪ ಮತ್ತು ಮಾಳಿಂಗರಾಯನು ಸಹ ಗೋರಖನಾಥ ಪಂಥಕ್ಕೆ ಸೇರಿರುತ್ತಾನೆ.

೯

ಒಂದು ದಿನ ಮಕ್ಕಳನ್ನು ಕರೆದು ಅಣ್ಣ ತುಕ್ಕಪ್ಪರಾಯ ಸಾಯುವಾಗ ಅವನಿಗೆ ನೀಡಿದ ವಚನದ ವಿವರವನ್ನು ಸೋಮರಾಯ ತಿಳಿಸಿ ಹೇಳುತ್ತಾನೆ.

ವಿದ್ಯೆ ಕಲಿತು ಹೊಸಬರಾದ ಜಕ್ಕಪ್ಪ ಮತ್ತು ಮಾಳಿಂಗರಾಯ ಈ ಹಿಂದೆ ತಮ್ಮನ್ನು ಸೋಲಿಸಿದ ಜಯಪಾಲನ ಜೊತೆ ಆಟವಾಡಿ ಅವನನ್ನು

ಸೋಲಿಸುತ್ತಾರೆ. ಅವನಲ್ಲಿದ್ದ ಸಂಪತ್ತನ್ನು ವಶಪಡಿಸಿಕೊಂಡು ಬಡಬಗ್ಗರಿಗೆ ಹಂಚುತ್ತಾರೆ.

ಮೇಲಿಂದ ಮೇಲೆ ಬರಗಾಲ ಬಿದ್ದು ಪಶುಗಳಿಗೆ ಜನಗಳಿಗೆ ಆಗುತ್ತಿದ್ದ ತೊಂದರೆಯನ್ನು ತಾವು ಪಡೆದುಕೊಂಡ ವಿದ್ಯೆಯ ಮೂಲಕ ಪರಿಹರಿಸುತ್ತಾರೆ. ಒಂದು ಹನಿ ನೀರಿರುವುದಿಲ್ಲ. ಇಂಥ ಕಷ್ಟದಿಂದ ಬೇಸತ್ತು ಮಳೆರಾಯನನ್ನು ಶಪಿಸುತ್ತಿರುತ್ತಾರೆ. ಅಲ್ಲೇ ಇದ್ದ ಮಾಳಪ್ಪ ತನ್ನ ಕಂಬಳಿಯನ್ನು ಬೀಸುವ ಮೂಲಕ ಮಳೆತರಿಸಿ ಊರ ಜನರಿಗೆಲ್ಲ ನೀರೊದಗಿಸುತ್ತಾನೆ.

ಹೀಗೆ ಅಲೆಯುತ್ತ ಅರಬ್ ದೇಶಕ್ಕು ಹೋಗುತ್ತಾನೆ. ಅಲ್ಲಿ ಹರಣಪುರ ಎಂಬ ಪಟ್ಟಣವನ್ನು ಕಟ್ಟುತ್ತಾನೆ. ಅಲ್ಲಿನ ಜನರನ್ನು ಒಂದೆಡೆ ಸೇರಿಸಿ ಧರ್ಮ ಪ್ರಚಾರ ಮಾಡುತ್ತಾನೆ. ಹರನ ಮಹಿಮೆಯನ್ನು ಸಾರುತ್ತಾನೆ.

ಆ ಪಟ್ಟಣದ ಶ್ರೀಮಂತರೊಬ್ಬರು ಕೆರೆಯನ್ನು ಕಟ್ಟಿಸಿ ಕೆರೆಯ ನೀರನ್ನು ಅಲ್ಲಿನ ಜನರಿಗೆ ಕೊಡದೆ ತಾವೊಬ್ಬರೇ ಬಳಸಿರುತ್ತಾರೆ. ಈ ವಿಷಯ ತಿಳಿದ ಮಾಳಿಂಗರಾಯ ತನ್ನ ಮಹಿಮೆಯಿಂದ ಆ ಕೆರೆಯ ಕಡ್ಡೆಯನ್ನು ಒಡೆದು ಎಲ್ಲಾ ಜನರಿಗೇ ನೀರೊದಗಿಸುತ್ತಾನೆ. ಶ್ರೀಮಂತನಿಗೆ ಕರೆದು ಸ್ವಾರ್ಥ ಗುಣವನ್ನು ಬಿಟ್ಟು ಪರೋಪಕಾರಿ ಆಗು ಎಂದು ಬುದ್ಧಿವಾದ ಹೇಳಿ ಅವನ ಮನಸ್ಸನ್ನು ಪರಿವರ್ತನೆಗೊಳಿಸುತ್ತಾನೆ.

ತನ್ನ ತಂದೆಯ ಸಾವಿಗೆ ಕಾರಣರಾದ ಬೇಡರು ವಾಸಿಸುವ ಹಟ್ಟಿಗೆ ಬರುತ್ತಾರೆ. ತಂದೆಯ ವಚನದಂತೆ ಏಳುನೂರು ಜನ ಬೇಡರು ತಲೆಯನ್ನು ತೆಗೆಯಲು ಒಟ್ಟು ಇಪ್ಪತ್ನಾಲ್ಕು ಸಾವಿರ ಜನರ ದಂಡು ಸಿದ್ಧ ಮಾಡುತ್ತಾನೆ ಆ ದಂಡಿಗ ಸಹಾಯದಿಂದ ಸುತ್ತ ಮುತ್ತಲಿನ ಗ್ರಾಮದಲ್ಲಿರುವ ಎಲ್ಲ ಬೇಡರನ್ನು ಹಿಡಿದು ತಂದು ಸಾಲು ಸಾಲಾಗಿ ದಾವಣಿಗೆ ಕಟ್ಟಿ ಅವರ ರುಂಡವನ್ನು ಕಡಿದು ತಂದೆಯ ಸಮಾಧಿಗೆ ತರುತ್ತಾರೆ. ಆ ಸಮಾಧಿ ಮುಂದೆಯೇ ತೆಗ್ಗು ತೋಡಿ ಆ

ಏಳುನೂರು ಜನರ ರುಂಡಗಳನ್ನು ಅದರಲ್ಲಿ ಹಾಕಿ ಅವರ ಮೇಲೆ ಚಕ್ರಕಟ್ಟೆ ಕಟ್ಟುತ್ತಾರೆ ಅದಕ್ಕೆ ರುದ್ರಗಟ್ಟೆ ಎಂದು ಹೆಸರಿಟ್ಟು ಅಲ್ಲಿಯೇ ಹೇಳಿಕೆ ಮಾಡುತ್ತಾರೆ.

ತನ್ನ ವಿದ್ಯೆಯಿಂದ ಅಪಾರವಾದ ಜನಮನ್ನಣೆಯನ್ನು ಪಡೆದ ಮಾಳಿಂಗರಾಯ ಬೇಡಿದವರಿಗೆ ಬೇಕಾದ್ದನ್ನು ಕೊಡುವ ಮೂಲಕ ಶಿವನನ್ನು ಮೀರಿಸುವಷ್ಟು ಶಕ್ತಿವಂತ ಆಗುತ್ತಾನೆ. ಒಂದು ಸಲ ಗುರುವಾದ ಬೀರಪ್ಪನು ಶಿಷ್ಯನ ಹತ್ತಿರ ಹುಲಿಯ ಗಿಣ್ಣು ತಿನ್ನುವ ಅಭಿಲಾಷೆ ವ್ಯಕ್ತಪಡಿಸಿದಾಗ, ತಡಮಾಡದೆ ಮಾಳಿಂಗರಾಯ ಹುಲಿಗುಡ್ಡಕ್ಕೆ ಹೋಗಿ ಹುಲಿಗಳನ್ನು ಹಿಡಿದು ತಂದು ಸಾಕುತ್ತಾನೆ. ಅವುಗಳ ಹಾಲು ಹಿಂಡಿ ಗಿಣ್ಣು ತಯಾರಿಸಿ ಗುರುವಿನ ಇಷ್ಟಾರ್ಥವನ್ನು ಪೂರೈಸುತ್ತಾನೆ.

ಹುಲಿ ಮೂಲತಃ ಕ್ರೂರ ಪ್ರಾಣಿ. ಅಂಥ ಕ್ರೂರವಾದ ಹುಲಿಯನ್ನು ಸಾಕುವುದೆಂದರೆ ಸಾಮಾನ್ಯವಲ್ಲ. ಆದರೆ ಆ ಹುಲಿಯ ಬಾಯಿಂದಲೇ ಮಾಳಿಂಗರಾಯ ವೇದ ಓದಿಸುತ್ತಾನೆ. ಅಂದರೆ ಅದರ ಕ್ರೌರ್ಯವನ್ನು ಸೌಮ್ಯವಾಗಿ ಪರಿವರ್ತಿಸುವ ಮನೋಭಾವ ಹೊಂದಿದ್ದನು ಎಂದು ತಿಳಿಯಬಹುದು.

ಹುಲಿ ಎಂದರೆ ಕುರಿಗಳಿಗೆ ಭಯ. ಆದರೆ ಮಾಳಿಂಗರಾಯನು ಅ ಹುಲಿಗಳನ್ನು ಹಿಡಿದು ತಂದು ಕುರಿದೊಡ್ಡಿ ಕಾಯಲು ಹಚ್ಚುತ್ತಾನೆ. ಕ್ರೌರ್ಯಕ್ಕೆ ವಿವೇಕ ಇರುವುದಿಲ್ಲ. ಅ ಕ್ರೌರ್ಯಕ್ಕೆ ಮತ್ತೊಂದು ಹೆಸರು ಹುಲಿ. ಅದಕ್ಕೇನೆ ಅಂಥ ಜವಾಬ್ದಾರಿ ಕೆಲಸ ವಹಿಸಿದಾಗ ಎಂಥ ಪ್ರಾಣಿಯಾದರೂ ತನ್ನಲ್ಲಿ ಬದಲಾವಣೆ ತಂದುಕೊಳ್ಳುತ್ತದೆ. ಹಾಗೇ ಇಲ್ಲಿ ಮಾಳಿಂಗರಾಯ ಹುಲಿಯ ಕ್ರೌರ್ಯವನ್ನು ವಿವೇಕವಾಗಿ ಪರಿವರ್ತಿಸುತ್ತಾನೆ.

೧೦

ಮಾಳಿಂಗರಾಯ ಸಾಮಾನ್ಯ ಶಿವಭಕ್ತನಾಗಿರಲಿಲ್ಲ. ಬಹುಶಃ ಸಿದ್ಧರ ಪ್ರಭಾವವೋ ಏನೋ ತಪಸ್ಸು ಮಾಡಲು ಕುಳಿತರೆ ಅಂಗೈಗೆ ಐದುನೂರು ಲಿಂಗ

ಮುಂಗೈಗೆ ಮುನ್ನೂರು ಲಿಂಗ, ಮಂಡಿಗೆ ಸಾವಿರಲಿಂಗ ಮಾಡಿ ಭಕ್ತಿಯಿಂದ ಶಿವಪೂಜೆ ಮಾಡುತ್ತಿದ್ದ.

ಮಾಳಿಂಗರಾಯನ ಗುರುವಾದ ಬೀರಪ್ಪನು ಹಠಮಾರಿ ಸ್ವಭಾವದವನು ಹೊಟ್ಟೆಯಲ್ಲಿಯೇ ಉಗ್ರರೂಪ ತಾಳಿ, ಸಿಡಿದು ಹೊರಬಂದು ತನ್ನನ್ನು ಕೊಲ್ಲಲು ನಿಂತ ಸೂಲಗಿತ್ತಿಯರನ್ನೇ ಒದ್ದೋಡಿಸಿದವನು. ಅಂತಹ ದುಷ್ಟಶಕ್ತಿಯ ವಿರುದ್ಧ ಬಂಡೇಳುವ, ಪ್ರತಿಭಟಿಸುವ ಮನೋಭಾವದವನು.

ಬೀರಪ್ಪನಿಗೆ ಮಾಳಿಂಗರಾಯ ಎಂದರೆ ಬಲು ಪ್ರೀತಿ. ತನ್ನ ಶಿಷ್ಯನ ಕೀರ್ತಿ ಭೂಲೋಕದಲ್ಲಿ ಅಷ್ಟೇ ಅಲ್ಲ, ಕೈಲಾಸದಲ್ಲಿಯೂ ಹಬ್ಬಬೇಕು. ನನ್ನೆತ್ತರಕ್ಕೆ ನನ್ನ ಶಿಷ್ಯ ಬೆಳೆಯಬೇಕು ಎಂಬ ಹಂಬಲ ಉಳ್ಳವನು. ಕೈಲಾಸದಲ್ಲಿ ತವಕದಿಂದ ಶಿವನ ಸೇವೆ ಮಾಡುತ್ತಿದ್ದ ಅಮೋಘಸಿದ್ಧನ ಸೊಕ್ಕುಮುರಿಯಬೇಕೆಂದು ಅಂದುಕೊಂಡಿರುತ್ತಾನೆ.

ಈ ಎರಡೂ ಕಾರ್ಯ ಕೈಗೂಡಬೇಕಾದರೆ ಇದಕ್ಕೆ ತಕ್ಕ ವ್ಯಕ್ತಿ ತನ್ನ ಶಿಷ್ಯ ಮಾಳಿಂಗರಾಯ. ಅದರಂತೆ ಒಂದು ಸಲ ತನ್ನ ಶಿಷ್ಯನನ್ನು ಕರೆಯಿಸಿ ತನ್ನ ಮನಸ್ಸಿನ ಭಾವನೆಗಳನ್ನು ಮಾಳಿಂಗರಾಯನ ಮುಂದೆ ಹೇಳುತ್ತಾನೆ. ಕೈಲಾಸದಲ್ಲಿರುವ ಅಜಾನುವೃಕ್ಷದ ಹೂವುಗಳನ್ನು ತಂದು ನನಗೆ ಪೂಜೆ ಮಾಡಬೇಕೆಂದು ಹೇಳುತ್ತಾನೆ.

ಸತ್ಯಭಾಮೆ ಇಷ್ಟಪಟ್ಟ ಪಾರಿಜಾತದ ಹೂವನ್ನು ತರಲು ಕೃಷ್ಣ ಇಂದ್ರಲೋಕಕ್ಕೆ ಹೋದಾಗ ಹೂವು ಕೊಡಲು ನಿರಾಕರಿಸಿದ ಇಂದ್ರನ ಸೊಕ್ಕನ್ನೇ ಮುರಿದು ಪಾರಿಜಾತ ಹೂ ತಂದ ಕೃಷ್ಣನ ಪ್ರಸಂಗ ನೆನಪಿಸುವಂತೆ.

ಇಲ್ಲಿಯೂ ಸಹ ಅಜಾನುವೃಕ್ಷದ ಹೂವಿನ ಸಲುವಾಗಿ ಇಬ್ಬರ ಭಕ್ತರ ಮಧ್ಯೆ ಸ್ಪರ್ಧೆ ಏರ್ಪಡುತ್ತದೆ.

ಒಟ್ಟು ಒಂಬತ್ತು ಜನ ಸಿದ್ಧರಲ್ಲಿ ಅಮಲಸಿದ್ಧನು ಒಬ್ಬ. ಅಮಲಸಿದ್ಧ, ಶಿವಗಿರಿ ಸಿದ್ಧ, ಮಣಿಸಿದ್ಧ, ಗುಗ್ಗರಿಸಿದ್ಧ, ಕೊಳಲುಸಿದ್ಧ, ಗೆರೆಸಿದ್ಧ, ವಶಸಿದ್ಧ,

ಜೋಗಸಿದ್ಧ ಮತ್ತು ರೇವೂಸಿದ್ಧ ಪ್ರಮುಖರು. ಇವರೆಲ್ಲ ಶಿವನಿಂದಲೇ ಹುಟ್ಟು ಪಡೆದವರು. ಇದರಲ್ಲಿ ಏಳು ಜನ ಸಿದ್ಧರು ಲೋಕಕಲ್ಯಾಣಕ್ಕಾಗಿ ಭೂಲೋಕಕ್ಕೆ ಬರುತ್ತಾರೆ.

ಇವರು ಭೂಲೋಕದಲ್ಲಿ ಜನರೊಂದಿಗೆ ಬೆರೆತು ಅವರ ಕಷ್ಟ ನಷ್ಟಗಳಿಗೆ ಸ್ಪಂದಿಸುತ್ತ ಜನಸಾಮಾನ್ಯರಲ್ಲಿ ಸಾಮಾನ್ಯರಾಗಿ ಬದುಕುತ್ತಾರೆ. ಆದರೆ, ಅಮಲ ಸಿದ್ಧ ಮತ್ತು ಶಿವಗಿರಿಸಿದ್ಧರು ಮಾತ್ರ ಶಿವ ಪಾರ್ವತಿಯರ ಸೇವೆ ಮಾಡಲು ಕೈಲಾಸದಲ್ಲಿಯೇ ಉಳಿಯುತ್ತಾರೆ.

ಅಮಲಸಿದ್ಧ ಪ್ರತಿದಿನ ಉದ್ಯಾನವನದಲ್ಲಿನ ತಾಜಾ ಅಜಾನುವೃಕ್ಷದ ಹೂವು ತಂದು ಶಿವನನ್ನು ಪೂಜಿಸುತ್ತಿರುತ್ತಾನೆ. ಹೂವಿನ ಜೊತೆಗೆ ದಾರವೂ ದೇವರ ಮುಡಿ ಏರಿ ತಾನೂ ಶ್ರೇಷ್ಠ ಅಂದುಕೊಳ್ಳುವಂತೆ ಇಲ್ಲಿ ಅಮಲಸಿದ್ಧನು ಸಹ ಪ್ರತ್ಯಕ್ಷ ಶಿವನ ಪೂಜೆ ಮಾಡುವ ನಾನೇ ಶ್ರೇಷ್ಠ ಸಿದ್ಧ ಎಂದು ಅಹಂಕಾರದಿಂದ ಹೇಳಿಕೊಳ್ಳುತ್ತಿರುತ್ತಾನೆ. ಇದು ಬೀರಪ್ಪನಿಗೆ ಸರಿ ಕಾಣುವುದಿಲ್ಲ. ಅದಕ್ಕೆ ಮಾಳಿಂಗರಾಯನಿಂದ ಅಮಲಸಿದ್ಧನ ಅಮಲು ಇಳಿಸುವಂತೆ ಮಾಡುತ್ತಾನೆ.

ಬೀರಪ್ಪನ ಕೋರಿಕೆಯಂತೆ ಮಾಳಿಂಗರಾಯ ಕೈಲಾಸಕ್ಕೆ ಹೋಗುತ್ತಾನೆ. ಉದ್ಯಾನವನದಲ್ಲಿರುವ ಅಜಾನುವೃಕ್ಷ ನೋಡುತ್ತಾನೆ. ಅದನ್ನು ಕಾಯಲು ಶಿವಗಣ ನಿಂತಿರುತ್ತದೆ. ತನ್ನ ವಂಶದ ಇಂಗಿತವನ್ನು ಶಿವಗಣದೆದುರು ಹೇಳುತ್ತಾನೆ. ಅದಕ್ಕೆ ಒಪ್ಪದೆ ನೇರವಾಗಿ ಮಾಳಿಂಗರಾಯನ ಮೇಲೆ ಯುದ್ಧಕ್ಕೆ ಬರುತ್ತಾರೆ. ಇಡೀ ಶಿವಗಣದ ದಾಳಿಯನ್ನು ಸಮರ್ಪಕವಾಗಿ ಎದುರಿಸಿ ಅವರ ಮೇಲೆ ಭಂಡಾರ ಎಸೆದು ಮೂರ್ಛೆಗೊಳಿಸಿ ಅಜಾನುವೃಕ್ಷದ ಹೂವುಗಳನ್ನು ತೆಗೆದುಕೊಂಡು ಭೂಲೋಕಕ್ಕೆ ಬರುತ್ತಾನೆ.

ಕೈಲಾಸದಲ್ಲಿರುವ ಅಮಲಸಿದ್ಧನಿಗೆ ಪೂಜೆ ಮಾಡಲು ತಾಜಾ ಹೂವು ಸಿಗುವುದಿಲ್ಲ. ಕೆಳಗೆ ಬಿದ್ದ ಹೂವುಗಳನ್ನೇ ಎತ್ತಿಕೊಂಡು ಹೋಗಿ ಶಿವನ ಪೂಜೆ

ಮಾಡುತ್ತಾನೆ. ಅಮಲಸಿದ್ಧನ ಮುಖದ ಮೇಲೆ ಎಂದಿನ ಕಳೆ ಇರುವುದಿಲ್ಲ. ಕಳೆಗುಂದಿದ ಅಮಲಸಿದ್ಧನ ಮುಖ ನೋಡಿದ ಶಿವ ತನ್ನ ಮನಸ್ಸಿನಲ್ಲಿಯೇ ನಕ್ಕು ನಿನಗಿಂತ ಆ ಮಾಳಿಂಗರಾಯನೇ ಹೆಚ್ಚಿನ ಸಿದ್ಧ ಎಂದು ಸಾರುತ್ತಾನೆ. ಇದರಿಂದ ಅಮಲಸಿದ್ಧನಿಗೆ ಅವಮಾನವಾಗುತ್ತದೆ. ಕೋಪಗೊಂಡ ಅಮಲಸಿದ್ಧ ಹೇಗಾದರೂ ಮಾಡಿ ಮಾಳಪ್ಪನನ್ನು ಅವಮಾನಿಸಬೇಕೆಂದು ಪಟ್ಟುಹಿಡಿಯುತ್ತಾನೆ. ಅದೇ ವೇಳೆ ಮಾರುವೇಷದಲ್ಲಿ ಭೂಲೋಕಕ್ಕೆ ಬರುತ್ತಾನೆ.

ಇಬ್ಬರಲ್ಲಿ ಯಾರು ಶ್ರೇಷ್ಠ ಎಂಬುದಕ್ಕೆ ಒಂದು ಸ್ಪರ್ಧೆ ಏರ್ಪಡುತ್ತದೆ. ಅದು ಕರಿ ಕಂಬಳಿ ಬೀಸುವ ಮೂಲಕ ಮಳೆ ತರಿಸುವುದು.

ಮೂರು ತಿಂಗಳಿಂದ ಮಳೆ ಬಂದಿರುವುದಿಲ್ಲ. ಭೂಮಿಗೆ ಮಳೆ ತರಿಸಬೇಕೆಂದು ಮಾಳಿಂಗರಾಯ ಅಮಲಸಿದ್ಧನಿಗೆ ಸೂಚಿಸುತ್ತನೆ. ನೀನೇ ಮೊದಲು ತರಿಸು ಎಂದು ಮಾಳಿಂಗರಾಯನಿಗೆ ಹೇಳುತ್ತಾನೆ. ಆಗ ಮಾಳಿಂಗರಾಯ ಒಂದು ಕರಿಕಂಬಳಿಯನ್ನು ಹಾಸಿ ಅದರ ಮೇಲೆ ಕುಳಿತು ಉಗ್ರವಾಗಿ ತಪಸ್ಸು ಮಾಡಿ ಇಡೀ ಕೈಲಾಸವೇ ನಡುಗುವಂತೆ ಮಾಡುತ್ತಾನೆ. ಇದರಿಂದ ಭಯ ಭೀತನಾದ ಶಿವ ಮೇಘರಾಜನಿಗೆ ಮಳೆ ಬೀಳಿಸಲು ಆಜ್ಞೆಮಾಡುತ್ತಾನೆ. ಸಿಡಿಲು ಮಿಂಚು ಗುಡುಗಿನೊಂದಿಗೆ ಭಾರೀ ಮಳೆಯಾಗುತ್ತದೆ.

ಭಾರೀ ಮಳೆಯ ಸೂಚನೆ ತಿಳಿದುಕೊಂಡೆ ಮಾಳಿಂಗರಾಯ ಮೊದಲೇ ಹೊಳೆದಂಡೆಯ ಮೇಲಿರುವ ಕುರಿ ದೊಡ್ಡಿಗಳನ್ನು ದಿಡ್ಡಿಯ ಮೇಲೆ ತಂದಿರುತ್ತಾನೆ. ಈ ವಿಚಾರ ತಿಳಿದು ಶಿವನಿಗೆ ಭಾರೀ ಸಂತೋಷವಾಗುತ್ತದೆ. ನಿನ್ನ ಭಕ್ತಿಗೆ, ಪಶುಕಾಳಜಿಗೆ, ಸಾಮಾಜಿಕ ಕಳಕಳಿಗೆ ನಾನು ಮೆಚ್ಚಿದ್ದೇನೆ. ಏನು ವರ ಬೇಕು ಕೇಳಿಕೋ ಎಂದು ಸಾಕ್ಷಾತ್ ಶಿವನೇ ನುಡಿಯುತ್ತಾನೆ.

ಆದಕ್ಕೆ ಮಾಳಿಂಗರಾಯ ಬೇಕಾದ್ದ ಕೊಟ್ಟೆದ್ದಿ, ಬ್ಯಾಡಾದ್ದ ಬಿಟ್ಟೆದ್ದಿ. ನನಗೇನು ಬೇಕಾಗಿಲ್ಲ. ನಿನ್ನ ಪಾದದ ಹೊರತು ನನಗೇನು ಬೇಕಾಗಿಲ್ಲವೆಂದು ನಿಸ್ವಾರ್ಥಭಾವದಿಂದ ನುಡಿಯುತ್ತಾನೆ. ಮತ್ತೊಮ್ಮೆ ಸಿದ್ಧರಲ್ಲಿಯೇ ಶ್ರೇಷ್ಠ ಸಿದ್ಧ ನೀನೇ ಎಂದು ನುಡಿದು ಅವನನ್ನು ಹರಸಿ ಶಿವ ಕೈಲಾಸಕ್ಕೆ ಹೋಗುತ್ತಾನೆ. ಅಮಲ ಸಿದ್ಧ ಮುಖ ಕೆಳಗೆ ಹಾಕಿ ನೀನೇ ಶ್ರೇಷ್ಠಸಿದ್ಧ ನಿನ್ನನ್ನು ಮೀರಿಸುವ ಸಿದ್ಧ ಮತ್ತೊಬ್ಬನಿಲ್ಲ, ನಿನ್ನ ಮುಂದೆ ನಾನು ಕನಿಷ್ಠನಾದೆ ಎಂದು ಬೀರಪ್ಪ ಮತ್ತು ಮಾಳಿಂಗರಾಯನಲ್ಲಿ ಕ್ಷಮೆ ಕೋರಿ ಮತ್ತೆ ಕೈಲಾಸಕ್ಕೆ ಹೋಗದೆ ಬೀರಪ್ಪ ಮತ್ತು ಮಾಳಿಂಗರಾಯನ ಸೇವೆ ಮಾಡುತ್ತ ಭೂಲೋಕದಲ್ಲಿಯೇ ಇದ್ದು ಬಿಡುತ್ತಾನೆ.

ಮಾಳಿಂಗರಾಯನನ್ನು ಸ್ವತಃ ಶಿವನೇ ಬಂದು ಪರೀಕ್ಷಿಸಿ ಶ್ರೇಷ್ಠಸಿದ್ಧನ ಪಟ್ಟ ನೀಡಿದ ನಂತರ ಈಗ ಮಾತೃದೇವತೆಗಳು ಸಹಾ ಇವನನ್ನು ಪರೀಕ್ಷಿಸಲೆಂದು ಭೂಲೋಕಕ್ಕೆ ಬರುತ್ತಾರೆ. ಪೂಜಾರಿ ಪುರೋಹಿತರು ಯಜ್ಞಯಾಗಾದಿಗಳನ್ನು ಮಾಡುವಂತೆ ಈತನೂ ಸಹ ಯಜ್ಞ ಮಾಡುತ್ತಿರುತ್ತಾನೆ. ಈ ಯಜ್ಞವು ಭಯಂಕರವಾಗಿರುತ್ತದೆ. ಅದರ ತೀವ್ರತೆ ಎಷ್ಟಿತ್ತೆಂದರೆ ಇಡೀ ಆಕಾಶ ಭೂಮಿಯನ್ನು ನಡುಗುವಂತೆ ಮಾಡುತ್ತದೆ.

ಇದರಿಂದ ಗಾಬರಿಗೊಂಡ ಶಿವನು ಇದಕ್ಕೆ ಕಾರಣ ಯಾರೆಂದು ಕೇಳುತ್ತಾನೆ. ಭೂಲೋಕದ ಮಾಳಿಂಗರಾಯನ ಯಜ್ಞವೇ ಕಾರಣವೆಂದು ಮಾತೃದೇವತೆ ಲಾಯವ್ವ ನುಡಿಯುತ್ತಾಳೆ. ಲಾಯವ್ವ ಕೋಪಗೊಳ್ಳುತ್ತಾಳೆ. ಹೇಗಾದರೂ ಮಾಡಿ ಆ ಮಾಳಿಂಗನನ್ನು ಬಂಧಿಸಿ ತರಬೇಕೆಂದು ದೈತ್ಯರಿಗೆ ಆದೇಶಿಸುತ್ತಾಳೆ. ಸರ್ಪದ ಬಲೆಯನ್ನು ಹಿಡಿದು ನೇರವಾಗಿ ಸಿಡಿಯಾಣ ಮಾಳಕ್ಕೆ ದೈತ್ಯರು ಬರುತ್ತಾರೆ. ಅಲ್ಲಿ ತಪಸ್ಸು ಮಾಡುತ್ತ ಕುಳಿತ ಮಾಳಿಂಗರಾಯನನ್ನು ಹಿಡಿಯಲು ಸರ್ಪದ ಬಲೆ ಬೀಸುತ್ತಾರೆ. ಬೀರಪ್ಪನಿಂದ ಮೊದಲೇ ವಿಷಯ ತಿಳಿದ ಮಾಳಿಂಗರಾಯ ಅದೇ ಬಲೆಯಿಂದಲೇ ಆ ದೈತ್ಯರನ್ನು ಕಟ್ಟಿ ಹಾಕುತ್ತಾನೆ. ಇಡೀ ದೈತ್ಯ ಸಮೂಹ ವಿಲಿವಿಲಿ ಒದ್ದಾಡುವಂತೆ ಮಾಡುತ್ತಾನೆ. ಕಷ್ಟವನ್ನು ಸಹಿಸದೆ ದೈತ್ಯರು

ಶರಣಾಗುತ್ತಾರೆ. ಮೃದುಸ್ವಭಾವದ ಮಾಳಿಂಗರಾಯ ಎಲ್ಲ ದೈತ್ಯರನ್ನು ಬಿಟ್ಟು ಬಿಡುತ್ತಾನೆ.

ಭೂಲೋಕದಲ್ಲಿ ನಡೆದ ವಿಷಯವನ್ನು ಕೈಲಾಸದಲ್ಲಿರುವ ಲಾಯವ್ವ ಮತ್ತು ಶ್ರೀದೇವಿಯ ಮುಂದೆ ದೈತ್ಯರು ಪರಿಪರಿಯಾಗಿ ಹೇಳುತ್ತಾರೆ. ನಾವು ಏನೇ ಮಾಡಿದರೂ ಆ ಮಾಳಿಂಗರಾಯನನ್ನು ಸೋಲಿಸಲು ಯಾರಿಂದಲೂ ಸಾಧ್ಯವಿಲ್ಲವೆಂದು ಖಡಾಖಂಡಿತವಾಗಿ ನುಡಿಯುತ್ತಾರೆ.

ಕೋಣನ ಬಂಡಿಯಲ್ಲಿ ವಿಷ ಹಾಗೂ ಅಮೃತದ ಕೊಡ ಹೇರಿಕೊಂಡು ಕ್ಷುದ್ರದೇವತೆಯ ರೂಪ ಧರಿಸಿಕೊಂಡು ಕೈಯಲ್ಲಿ ಹಾವಿನ ಬಾರಕೋಲು ಹಿಡಿದುಕೊಂಡು ಆಕಾಶಮಾರ್ಗವಾಗಿ ಬರುತ್ತಿರುತ್ತಾಳೆ. ದಿವ್ಯಜ್ಞಾನದಿಂದ ಮೊದಲೇ ದೇವತೆಗಳ ಆಗಮನದ ವಿಷಯ ತಿಳಿದ ಮಾಳಿಂಗರಾಯ ನಡುದಾರಿಯಲ್ಲಿಯೇ ಅವರ ಬಂಡಿಯ ಗಾಳಿಗಳು ಕಳಚಿ ಹಳ್ಳಕ್ಕೆ ಬೀಳುವಂತೆ ಮಾಡುತ್ತಾನೆ.

ಇಬ್ಬರೂ ದೈವೀಶಕ್ತಿಯಿಂದ ಹಾಗೆಯೇ ಸಿಡಿಯಾಣಕ್ಕೆ ಬರುತ್ತಾರೆ. ಮಾಳಿಂಗರಾಯ ಎಲ್ಲಿದ್ದಾನೆ ಎಂದು ಅಲ್ಲಿದ್ದ ಗುರು ಬೀರಪ್ಪನನ್ನು ಪ್ರಶ್ನಿಸುತ್ತಾರೆ. ಅವ ಇದ್ದಲ್ಲೇ ಇದ್ದಾನೆ, ಅವನ ಇರವು ಯಾರಿಗೆ ಗೊತ್ತು ಎಂದು ಒಗಟಾಗಿ ನುಡಿಯುತ್ತಾನೆ. ಕೊನೆಗೆ ಬೇರೆ ಯಾರಿಂದಲೋ ಮಾಳಿಂಗರಾಯ ಕ್ವಾಣೂರು ಮಠದಲ್ಲಿ ಇರುವ ವಿಷಯ ತಿಳಿದು ಅಲ್ಲಿಗೆ ಹೋಗುತ್ತಾರೆ. ಅಲ್ಲಿನ ಕರಿದೇವರಿಗೆ ಮಾಳಪ್ಪನ ಇರುವಿಕೆ ಕುರಿತು ಕೇಳುತ್ತಾರೆ. ಸರಿಯಾದ ಮಾಹಿತಿ ದೊರೆಯದೆ ಕೈಗೆ ಸಿಗದ ಮಾಳಿಂಗರಾಯನ ಬಗ್ಗೆ ಬೇಸರಗೊಂಡು ಅದೇ ಬಂಡಿ ಹತ್ತಿ ಆಕಾಶಮಾರ್ಗವಾಗಿ ಕೈಲಾಸಕ್ಕೆ ಹೋಗುತ್ತಿರುತ್ತಾರೆ. ಆದರೆ ಮಾರ್ಗಮಧ್ಯದಲ್ಲಿ ಕರಿಸಿದ್ಧಪ್ಪನ ಗುಡಿಯ ಕಳಶಕ್ಕೆ ಇವರ ಬಂಡಿಯ ಚಕ್ರ ಬಡಿದು ಕಳಸ ಮುರಿದು ಹೋಗುತ್ತದೆ. ಈ ಕಾರಣದಿಂದಲೇ ಇದುವರೆಗೂ ಕರಿಸಿದ್ಧಪ್ಪನ ದೇವಸ್ಥಾನಕ್ಕೆ ಕಳಶ ಇರುವುದಿಲ್ಲವೆಂಬ ಐತಿಹ್ಯವಿದೆ.

ಲಾಯವ್ವಳ ಬಂಡಿ ಮುರಿದುಬೀಳುತ್ತದೆ. ಈಗೇನು ಮಾಡಬೇಕೆಂದು ಪುನಃ ಶ್ರೀದೇವಿ ಜೊತೆಗೂಡಿ ದಾರಿಯಲ್ಲಿ ಸಿಕ್ಕವರನ್ನು ಮಾಳಿಂಗರಾಯನ ಬಗ್ಗೆ ಕೇಳುತ್ತ ಸಿಡಿಯಾಳಕ್ಕೆ ಬರುತ್ತಾರೆ. ಅವರ ಕಣ್ಣಿಗೆ ಕಾಣದೆ ಮರೆಯಲ್ಲಿ ನಿಂತು ಚೇಷ್ಟೆ ಮಾಡುತ್ತ ಅವರಿಬ್ಬರ ಮೂಗಿನ ಮುತ್ತು ಮಾಯ ಮಾಡುತ್ತಾನೆ. ಏಕಾಏಕಿ ಮೂಗುತಿ ಮಾಯವಾಗಿದ್ದನ್ನು ಕಂಡು ಗಲಿಬಿಲಿಗೊಳ್ಳುತ್ತಾರೆ. ಎಲ್ಲೆಡೆ ಮೂಗುತಿಯನ್ನು ಹುಡುಕುತ್ತಾರೆ. ಮಣ್ಣಲ್ಲಿ ಬಿದ್ದಿರಬಹುದೆಂದು ಮಣ್ಣನ್ನು ಸಹ ತೂರುತ್ತಾರೆ. ಆದರೂ ಮೂಗುತಿ ಸಿಗುವುದಿಲ್ಲ. ಅಷ್ಟೊತ್ತಿಗಾಗಲೇ ಅಲ್ಲಿಗೆ ಬಂದ ಮಾಳಿಂಗರಾಯ ಅವರ ಉಡಿಯಲ್ಲಿಯೇ ಬಿದ್ದ ಮೂಗುತಿಯನ್ನು ತೋರಿಸುತ್ತಾನೆ. ಮಾರುವೇಷದಲ್ಲಿದ್ದ ಮಾಳಪ್ಪ ನಾನೇ ಎಂದು ನಿಜ ರೂಪ ತೋರಿಸುತ್ತಾನೆ. ಆಗ ಲಾಯವ್ವ ಮತ್ತು ಶ್ರೀದೇವಿ ನೀನು ನಮ್ಮ ಜೊತೆಗೆ ಇದೇ ಕ್ಷಣ ಕೈಲಾಸಕ್ಕೆ ಬರಬೇಕೆಂದು ಆಜ್ಞೆ ಮಾಡುತ್ತಾರೆ.

ಆಗ ಮಾಳಪ್ಪ ಅವರಿಗೆ ಒಂದು ಪ್ರಶ್ನೆ ಮಾಡುತ್ತಾನೆ: "ನಿಮ್ಮ ಮೂಗುತಿಯೇ ಭೂಮಿಯ ಮೇಲೆ ಬಿದ್ದಿದೆ ಎಂದಾಗ ನಿಮಗೆ ಮುತ್ತೈದೆತನ ಎಲ್ಲಿದೆ" ಎಂದು ಕೇಳುತ್ತಾನೆ. ಇದರಿಂದ ಅವರಲ್ಲಿದ್ದ ನಾನು ಎಂಬ ಅಹಂಕಾರವಳಿದು ಹೋಗುತ್ತದೆ. ನಿಜವಾದ ಅರಿವು ಮೂಡುತ್ತದೆ.

ಹೆಣ್ಣಿಗೆ ಮೂಗುತಿಯೇ ಮುತ್ತೈದೆ ಸಂಕೇತ. ಅದೇ ಅವಳಿಗೆ ಶೃಂಗಾರ. ಅದಿಲ್ಲದೆ ಕೈಲಾಸಕ್ಕೆ ಪ್ರವೇಶವಿಲ್ಲ. ಒಂದು ವೇಳೆ ಮೂಗುತಿ ಕಳಚಿ ಕೆಳಗೆ ಬಿದ್ದರೆ ಅವರ ಮುತ್ತೈದೆತನ ಹೋದಂತೆ. ಅದಕ್ಕಾಗಿ ಮಾಳಿಂಗರಾಯ ಅವರ ಮೂಗುತಿಯನ್ನು ಕೆಳಗೆ ಬೀಳಿಸುವ ಮೂಲಕ ಅವರ ಅಹಂಕಾರ ಮಾಯವಾಗಿಸುತ್ತಾನೆ. ಇದರ ಜೊತೆಗೆ ಕೈಲಾಸವೆಂದರೇನು ಶ್ರೇಷ್ಠವಲ್ಲ, ಭೂಲೋಕವೆಂದರೇನು ಕನಿಷ್ಠವಲ್ಲ. ಎರಡು ಲೋಕಗಳೂ ಸಮಾನವಾಗಿವೆ ಎಂದು ಇದರಿಂದ ಸಾರುತ್ತಾನೆ.

ಭೂಲೋಕದಲ್ಲಿರುವ ಜನರೆಲ್ಲ ಕನಿಷ್ಠರು ಎಂದು ತಿಳಿದುಕೊಂಡು ಅವರಿಗೆ ಬುದ್ಧಿಕಲಿಸುವ ಉದ್ದೇಶದಿಂದ ಬಂದ ಲಾಯವ್ವ ಮತ್ತು ಶ್ರೀದೇವಿಯಂಥ ದೇವತೆಗಳನ್ನು ಮುಲಾಜಿಲ್ಲದೆ ಎದುರು ಹಾಕಿಕೊಂಡು ಭೂಲೋಕದ ನಿಜಸ್ಥಿತಿ ಏನು ಎಂಬುದು ಅವರಿಗೂ ತಿಳಿಯಬೇಕಾದರೆ ಅವರು ಇಲ್ಲಿಯೇ ಇರುವಂತೆ ಮಾಡುತ್ತಾನೆ.

ಮಾಳಿಂಗರಾಯನ ವಿದ್ಯೆಗೆ ಮನಸೋತು ಅವನ ಆಜ್ಞೆಯಂತೆ ಇಲ್ಲೇ ಇರಲು ಬಯಸುತ್ತಾರೆ. ಇವರು ಮತ್ತೆ ಕೈಲಾಸಕ್ಕೆ ಹೋಗದಿರಲು ಇನ್ನೊಂದು ಕಾರಣವೆಂದರೆ ಇವರು ದೇವತೆಗಳು, ಇವರ ಮೂಗುತಿ ಭೂಮಿಗೆ ಸ್ಪರ್ಶ ಮಾಡಿದ್ದರಿಂದ ಅವರು ಕೈಲಾಸಕ್ಕೆ ಹೋಗಲು ಅನರ್ಹರು. ಹೀಗಾಗಿ ಅವರು ಇಲ್ಲೇ ಇರುತ್ತಾರೆ. ಇವರಿಗಾಗಿ ಸಿಡಿಯಾಣದಲ್ಲಿ ಶೀಲವಂತೆ ಎಂಬ ದೇವಸ್ಥಾನ ಕಟ್ಟುತ್ತಾರೆ. ಪ್ರತಿ ವರ್ಷ ಮಾಳಪ್ಪನ ಜಾತ್ರೆ ಸಂದರ್ಭದಲ್ಲಿ ತಪ್ಪದೇ ಭೇಟಿ ಕೊಡುತ್ತೇವೆ ಎಂದು ಈ ದೇವತೆಗಳು ವಚನ ಕೊಡುತ್ತಾರೆ ಎಂಬ ನಂಬಿಕೆ ಇದೆ.

೧೧

ದೇವತೆಗಳು ಮಾಳಿಂಗನನ್ನು ಪರೀಕ್ಷಿಸುವ ವಿಷಯವನ್ನು ಹೀಗೂ ತಿಳಿದು ಕೊಳ್ಳಬಹುದು-ದೈತ್ಯರು ಭೂಲೋಕಕ್ಕೆ ಬಂದು ಮಾಳಿಂಗರಾಯನಿಂದ ಸೋತು ಮಾಯದಾಟದಲ್ಲಿ ಮಾಳಪ್ಪನನ್ನು ಮೀರಿಸುವ ವ್ಯಕ್ತಿ ಮತ್ಯಾರು ಇಲ್ಲ ಎಂಬಲ್ಲಿ ಮಾಳಪ್ಪನ ಚಮತ್ಕಾರಿಕ ವಿದ್ಯೆಯ ಮಹತ್ವ ಈ ಘಟನೆಯಿಂದ ತಿಳಿದುಬರುತ್ತದೆ.

ಅದೇ ಕ್ವಾಣೂರಿನ ಮಠದಲ್ಲಿ ಮೋಡಿಕಾರರ ಆಟ ನಡೆಯುತ್ತಿರುತ್ತದೆ ಆದರೆ ಮಾಳಿಂಗರಾಯ ಮೋಡಿಕಾರರ ಆಟವನ್ನು ವಿಫಲಗೊಳಿಸುತ್ತಾನೆ.

ಲಾಯವ್ವ ಮತ್ತು ಶ್ರೀದೇವಿ ಸಹ ಸಾಮಾನ್ಯ ಹೆಣ್ಣು ಮಕ್ಕಳು. ಅದರೂ ಬಂಡಿಯಲ್ಲಿ ವಿಷದ ಕೊಡ ತುಂಬಿಕೊಂಡು ಬರುವುದು, ಬಂಡಿಯ ಚಕ್ರ ಹಳ್ಳಕ್ಕೆ ಬಿದ್ದರೂ ಹಾಗೇ ಹಾರಿಬರುವುದು, ಮೂಗುತಿ ಮಾಯವಾಗುವುದು

ಇವೆಲ್ಲ ಮೋಡಿ ಆಟದ ತಂತ್ರ. ಈ ಎಲ್ಲ ಆಟಗಳು ಆ ಸ್ತ್ರೀದೇವತೆಗಳು ಮಾಳಪ್ಪನೊಂದಿಗೆ ಆಡಿದ್ದರು. ಅವರ ಆಟ ನಡೆಯದಂತೆ ಮಾಳಿಂಗರಾಯ ಅದನ್ನು ವಿಫಲಗೊಳಿಸಿ ಕೊನೆಗೆ ಶರಣಾಗುವಂತೆ, ಶಾಶ್ವತವಾಗಿ ಇಲ್ಲೇ ಉಳಿಯುವಂತೆ ಮಾಡಿದ್ದು ಮಾಳಪ್ಪನ ದೊಡ್ಡ ಪವಾಡವೇ ಎನ್ನಬಹುದು.

ಭೂಲೋಕ ಮತ್ತು ಕೈಲಾಸಗಳಲ್ಲಿನ ಶ್ರೇಷ್ಠತೆ-ಕನಿಷ್ಠತೆಯನ್ನು ಹೋಗಲಾಡಿಸಿದಂತೆ ಗುರು ಎಂದ ಮಾತ್ರಕ್ಕೆ ಶ್ರೇಷ್ಠವಲ್ಲ ಎಂಬುದನ್ನು ಸಾಕ್ಷಾತ್ ಶಿವನನ್ನೇ ಸೋಲಿಸುವ ಮೂಲಕ ಸಿದ್ಧಮಾಡಿ ತೋರಿಸಿದ್ದಾನೆ ಮಾಳಪ್ಪ.

ಒಮ್ಮೆ ಬರಗಾಲ ಬೀಳುತ್ತದೆ. ಈ ದೂರನ್ನು ತನ್ನ ತಪಸ್ಸಿನ ಮೂಲಕ ಪರಮೇಶ್ವರನಿಗೆ ತಿಳಿಸುತ್ತಾನೆ. ಇದು ನಿಜವೋ ಸುಳ್ಳೋ ಎಂಬುದನ್ನು ಪರೀಕ್ಷಿಸುವ ಸಲುವಾಗಿ ವೇಷ ಮರೆಸಿಕೊಂಡು ಶಿವನು ನಾರಾಯಣಪುರಕ್ಕೆ ಬರುತ್ತಾನೆ. ಬಂದು ಮಾಳಪ್ಪನನ್ನು ಭೇಟಿಯಾಗುತ್ತಾನೆ.

ನಾನು ಅರಬ್ ದೇಶದಿಂದ ಬಂದಿದ್ದೇನೆ. ಇಲ್ಲಿ ನೋಡಿದರೆ ಭೀಕರ ಬರಗಾಲವಿದೆ. ನೀವೆಲ್ಲ ತಿಳಿದವರು, ಮಳೆ ಯಾವಾಗ ಆಗುತ್ತದೆ ಎಂದು ತಿಳಿಸಿ ಎಂದು ಮಾಳಪ್ಪನಿಗೆ ಶಿವ ಕೇಳುತ್ತಾನೆ.

ಅದಕ್ಕೆ ಮಾಳಪ್ಪ ಒಂದು ವಾರದಲ್ಲಿ ಭಾರೀ ಪ್ರಮಾಣದಲ್ಲಿ ಮಳೆಯಾಗುತ್ತದೆ ಎಂದು ಭವಿಷ್ಯ ನುಡಿಯುತ್ತಾನೆ. ನೀನು ಹೇಳುತ್ತಿರುವುದು ಸುಳ್ಳು. ಇನ್ನು ಒಂದು ತಿಂಗಳವರೆಗೆ ಮಳೆಯಾಗುವುದಿಲ್ಲ ಎಂದು ಶಿವ ವಾದಿಸುತ್ತಾನೆ.

ಮಾಳಪ್ಪ-ನಾನು ಹೇಳುವುದು ಸುಳ್ಳಾದರೆ ಒಂದು ವಾರದವರೆಗೆ ತಡೆದು ನೋಡೋಣ ಎಂದು ಇಬ್ಬರೂ ಮಳೆಗಾಗಿ ಕಾಯುತ್ತಾರೆ.

ಮಾಳಪ್ಪ ಹೇಳಿದ್ದ ಭವಿಷ್ಯ ಹುಸಿ ಹೋಗುವುದಿಲ್ಲ. ಅತ ನುಡಿದಂತೆ, ಆ ದಿನವೇ ಭಾರಿ ಪ್ರಮಾಣದಲ್ಲಿ ಮಳೆ ಸುರಿಯುತ್ತದೆ. ಇಲ್ಲಿ ಶಿವ ಹೇಳಿದ ಭವಿಷ್ಯ ಸುಳ್ಳಾಗುತ್ತದೆ. ಶಿವ ಸೋಲುತ್ತಾನೆ. ಈ ಸೋಲು ಶಿಷ್ಯನ ಕೀರ್ತಿ ಹೆಚ್ಚಿಸುವ

ಒಂದು ತಂತ್ರ ಆಗಿರಬಹುದು.

ಮಹಾರಾಷ್ಟ್ರದ ಪಂಡರಪುರವು ಭಕ್ತಿಪಂಥದ ಮುಖ್ಯ ಕೇಂದ್ರವಾಗಿದೆ. ಶೈವಮತದ ವಿಠ್ಠಲನು ತನ್ನ ಮೋಹಕ ಮಾತುಗಳಿಂದ ಎಲ್ಲ ವರ್ಗದ ಜನರನ್ನು ಪಾಂಡವಪುರಕ್ಕೆ ಬರುವಂತೆ ಮಾಡಿದ್ದನು. ಆದರೆ ಮಾಳಿಂಗರಾಯ ವಿಠ್ಠಲನು ಶಿವನ ಶಿಷ್ಯ. ಶಿವನಿಗಿಂತ ವಿಠ್ಠಲ ಶ್ರೇಷ್ಠನಲ್ಲ ಎಂದು ಸಿದ್ಧಮಾಡಿ ತೋರಿಸುತ್ತಾನೆ.

ಶಿಷ್ಯ ಬೆಳೆಯಬೇಕಾದರೆ ಗುರು ಬೇಕೇಬೇಕು. ಗುರುವಿನ ದರ್ಶನವಾಗಬೇಕಾದರೆ ಶಿಷ್ಯನ ಸಹಾಯ ಅವಶ್ಯ. ಇಲ್ಲಿ ಹರಿ ಬೆಳೆಯಬೇಕಾದರೂ ಹರನ ಅವಶ್ಯಕತೆ ಇದೆ. ಹರ ನೇರವಾಗಿ ಹರಿಯ ಕೈಗೆ ಸಿಗುವುದಿಲ್ಲ. ಒಂದು ವೇಳೆ ಹರಿಯು ಹರನನ್ನು ಕಾಣಬೇಕಾದರೆ ಅವನ ಶಿಷ್ಯನ ಮುಖಾಂತರವೇ ಕಾಣಬೇಕು.

ಇಲ್ಲಿ ಪಾಂಡುರಂಗನು ಬ್ರಾಹ್ಮಣವೇಷದಲ್ಲಿ ಮಾಳಿಂಗರಾಯ ಇದ್ದಲ್ಲಿಗೆ ಬರುತ್ತಾನೆ. ತಂದೆಯ ಅಪ್ಪಣೆಯಂತೆ ಮಾಳಿಂಗರಾಯನ ಮಕ್ಕಳು ಬಡವರಿಗೆ ಅನ್ನ, ನೀರು, ಬಟ್ಟೆಗಳನ್ನು ದಾನ ಮಡುತ್ತಿರುತ್ತಾರೆ.

ಅಲ್ಲಿಗೆ ಬಂದ ಪಾಂಡುರಂಗ ನನಗೆ ಅನ್ನ, ಬಟ್ಟೆ ಬೇಕಾಗಿಲ್ಲ, ಬದಲಾಗಿ ಬಂಗಾರ ದಾನ, ಜ್ಞಾನ ದಾನ ಮಾಡಬೇಕೆಂದು ಕೇಳಿಕೊಳ್ಳುತ್ತಾನೆ. ಹೆಚ್ಚೇನು ತಿಳಿಯದ ಮಾಳಿಂಗರಾಯನ ಮಕ್ಕಳು ಇದನ್ನು ಬಿಟ್ಟು ಬೇರೆ ಏನೇ ಕೇಳುವುದಾದರೂ ನಮ್ಮ ತಂದೆಯನ್ನು ಕೇಳಿ. ನಿಮಗೆ ಬೇಕಾದ ವಸ್ತು ಸಿಗುತ್ತದೆ ಎಂದು ಸಲಹೆ ನೀಡುತ್ತಾರೆ.

ಮಕ್ಕಳು ಹೇಳಿದಂತೆ ಪಾಂಡುರಂಗ ಮಾಳಪ್ಪನಲ್ಲಿಗೆ ಹೋಗಿ ಕೇಳುತ್ತಾನೆ. ಪಾಂಡರಂಗ ಎಂಬ ವಿಷಯ ತಿಳಿದು ಮಾಳಿಂಗರಾಯ ಆತನ ಕಾಲು ಹಿಡಿದುಕೊಳ್ಳುತ್ತಾನೆ. 'ಕಾಲೇಕೆ ಹಿಡಿದುಕೊಳ್ಳುತ್ತೀರಿ ಮಾಳಿಂಗರಾಯನೇ ಕಾಲು ಬಿಡ್ರಿ' ಎಂದು ಎಷ್ಟು ಬಿಡಿಸಿಕೊಂಡರೂ ಮಾಳಪ್ಪ ಬಿಡುವುದಿಲ್ಲ.

ಯಾವ ಕಾರಣಕ್ಕಾಗಿ ನನ್ನ ಪಾದ ಹಿಡಿದಿರಿ ಎಂದು ಪಾಂಡುರಂಗ ಕೇಳಿದಾಗ 'ನಿಮ್ಮ ಹಸ್ತ ನನ್ನ ತಲೆಯ ಮೇಲೆ ಇಡುವವರೆಗೆ ನಾನು ಪಾದ ಬಿಡುವುದಿಲ್ಲವೆಂದು ಹಟ ಹಿಡಿಯುತ್ತಾನೆ. ಆಗ ಆಯ್ತು ಎಂದು ಪಾಂಡುರಂಗ ಮಾಳಪ್ಪನ ತಲೆಯ ಮೇಲೆ ಹಸ್ತ ಇಡುತ್ತಾನೆ. ದೀಪಾವಳಿ ಸಂದರ್ಭದಲ್ಲಿ ಮಾತ್ರ ನನ್ನ ನಿನ್ನ ಭೇಟಿ ಎಂದು ಪಾಂಡುರಂಗ ನುಡಿಯುತ್ತಾನೆ.

ಇಲ್ಲಿ ವೈಷ್ಣವ ಧರ್ಮಕ್ಕಿಂತ ಶೈವವೇ ಮೇಲು ಎಂದು ಹೇಳುವ ಸಲುವಾಗಿ ಮಾಳಿಂಗರಾಯನು ಪಾಂಡುರಂಗನ ಕಾಲು ಹಿಡಿಯುವಂತೆ ಮಾಡಲಾಗಿದೆ. ಅಂಥ ದೇವಲೋಕದ ದೇವಾನುದೇವತೆಗಳನ್ನೆಲ್ಲ ಸೋಲಿಸಿದ ಮಾಳಿಂಗರಾಯನನ್ನು ಪಾಂಡುರಂಗನ ಶಿಷ್ಯನಾಗಿಸುವ ಮೂಲಕ ಶಿವನೇ ಶ್ರೇಷ್ಠ ಎಂಬುದನ್ನು ಇಲ್ಲಿ ಸಾರಲಾಗಿದೆ.

ಮುಂದೆ ಶಿಷ್ಯನಾದ ಮಾಳಿಂಗರಾಯನನ್ನು ಪಾಂಡುರಂಗ ಪರೀಕ್ಷೆಗೆ ಒಡ್ಡುತ್ತಾನೆ. ಮಾಳಿಂಗರಾಯ ಗುರುವಿಗೆಂದು ಊಟದ ವ್ಯವಸ್ಥೆ ಮಾಡುತ್ತಾನೆ. ತಟ್ಟೆಯಲ್ಲಿ ಊಟ ಬಡಿಸಿ ಎದುರಿಗೆ ಇಟ್ಟಾಗ ಪಾಂಡುರಂಗನು ನನಗೆ ಬಡಿಸಿದ ಊಟದಲ್ಲಿಯೇ ಗ್ರಾಮದ ಜನರಿಗೆಲ್ಲ ಊಟ ಬಡಿಸಬೇಕೆಂದು ಮಾಳಪ್ಪನಿಗೆ ಆಜ್ಞಾಪಿಸುತ್ತಾನೆ.

ಒಂದು ಕ್ಷಣ ಯೋಚಿಸದೆ ಮಾಳಿಂಗರಾಯ ಗುರುವಿನ ಅಪೇಕ್ಷೆಯಂತೆ ಊರ ಜನರಿಗೆಲ್ಲ ಊಟ ಬಡಿಸುತ್ತಾನೆ. ಜನರೆಲ್ಲ ಊಟ ಮಾಡಿದರೂ ಇನ್ನೂ ಅಡಿಗೆ ಉಳಿದಿರುತ್ತದೆ. ಉಳಿದ ಊಟ ಹಾಳಾಗಬಾರದೆಂದು ನೀರಿಗೆ ಹಾಕಲು ಮಾಳಿಂಗರಾಯ ಹೇಳುತ್ತಾನೆ. ಮೀನುಗಳಾದರೂ ತಿನ್ನಲಿ ಎಂದು ಮಕ್ಕಳು ಅನ್ನತಂದು ಹೊಳೆಗೆ ಹಾಕುತ್ತಾರೆ.

ಹೀಗೆ ಊಟ ಮುಗಿಸಿ ಪರಸ್ಪರ ಯೋಗಕ್ಷೇಮ ವಿಚಾರಿಸಿಕೊಳ್ಳುತ್ತಾರೆ. ಪಾಂಡುರಂಗ ಶಿಷ್ಯನನ್ನು ಮಾತನಾಡಿಸುತ್ತ. ಆತನ ದಿನಚರಿಯ ಕುರಿತು ಕೇಳುತ್ತಾನೆ. ಆಗ ಮಾಳಪ್ಪ 'ನಾನು ದಿನನಿತ್ಯ ಹನ್ನೆರಡು ತಾಸು ಏಳುನೂರು ಕುರಿಗಳನ್ನು

ಕಾಯುತ್ತೇನೆ. ಸಾವಿರದ ಏಳ್ನೂರ ಒಂದು ಲಿಂಗ ಮಾಡಿ ತಪ್ಪದೇ ಅವುಗಳನ್ನು ಪೂಜೆ ಮಾಡುತ್ತೇನೆ' ಎಂದು ತಿಳಿಸುತ್ತಾನೆ.

ಇದನ್ನು ಕೇಳಿ ಪಾಂಡುರಂಗ ಬೆಚ್ಚಿಬೀಳುತ್ತಾನೆ. ಸಾದಾ ಸೀದಾ ಕುರಿ ಕಾಯುವ ಕುರುಬ ಎಂದಷ್ಟೇ ಮಾಳಿಂಗರಾಯನನ್ನು ತಿಳಿದುಕೊಂಡಿದ್ದ ಪಾಂಡುರಂಗ ದಿನನಿತ್ಯ ಅಷ್ಟೆಲ್ಲ ಲಿಂಗಗಳನ್ನು ಪೂಜೆ ಮಾಡುತ್ತಾನೆ ಎಂದಾಗ ಅವರಿಗೆ ನಂಬಲು ಸಾಧ್ಯವಾಗಲಿಲ್ಲ. ಅಲ್ಲಿರುವ ಎಲ್ಲ ಲಿಂಗಗಳನ್ನು ತೋರಿಸಿದಾಗ ಭಪ್ಪರೆ, ಶಿಷ್ಯ ಎಂದು ಅವರ ಭುಜ ತಟ್ಟುತ್ತಾನೆ.

ಮತ್ತೆ ಪರೀಕ್ಷೆ ಎಂಬಂತೆ-ಇವಿಷ್ಟು ಲಿಂಗಗಳಲ್ಲಿ ನನಗೊಂದು ಕೊಡಬೇಕು ಎಂದು ಕೇಳುತ್ತಾನೆ. ಗುರುವಿನ ಈ ಬೇಡಿಕೆ ಮಾಳಿಂಗರಾಯನಿಗೆ ಅನುಮಾನ ತರಿಸುತ್ತದೆ. ಹೀಗೆ ಯಾಕೆ ಕೇಳಿರಬಹುದು? ನನ್ನನ್ನು ಪರೀಕ್ಷಿಸಲಿಕ್ಕಾಗಿಯೋ ಅಥವಾ ನಿಜವಾಗಿಯೂ ಇವರಿಗೆ ಲಿಂಗ ಬೇಕಾಗಿದೆಯೆ? ಎಂದು ಅನುಮಾನಗೊಂಡು ತನ್ನ ಗುರು ಸೋನಾರ ಸಿದ್ಧ, ಬೀರಪ್ಪನನ್ನು ಧ್ಯಾನಮಾಡುತ್ತಾನೆ.

ಆಗ ಬೀರಪ್ಪನು ಏಳೂರು ಆಚೆ ಇರುವ ನದಿಯ ದಂಡೆಯ ಮೇಲಿನ ಮೂರು ಗುಂಡಿಯಲ್ಲಿನ ಲಿಂಗ ಕೊಡುವಂತೆ ಸಲಹೆ ಮಾಡುತ್ತಾನೆ. ಹಾಗೇ ಮಾಳಿಂಗರಾಯ ಏಳೂರು ದಾಟಿ ಸೋನ್ಯಾಳ ಗುಡ್ಡಕ್ಕೆ ಕರೆತರುತ್ತಾನೆ. ದೂರದಲ್ಲಿ ನಿಂತು ಲಿಂಗವನ್ನು ಪಾಂಡುರಂಗನಿಗೆ ಮಾಳಿಂಗರಾಯ ತೋರಿಸುತ್ತಾನೆ . ತೆಗೆದುಕೊಳ್ಳಬೇಕೆಂದು ಲಿಂಗದ ಹತ್ತಿರ ಪಾಂಡುರಂಗ ಹೋಗುತ್ತಲೇ ಗುಡುಗು, ಸಿಡಿಲು, ಮಿಂಚು, ಮಳೆ, ಒಮ್ಮೆಲೇ ಸುರಿಯುತ್ತವೆ. ಲಿಂಗ ಹಿಡಿದರೆ ಅದು ಈತನ ಕೈಗೇ ಸಿಗುವುದಿಲ್ಲ. ತನ್ನ ತಪ್ಪಿನ ಅರಿವು ಪಾಂಡುರಂಗನಿಗಾಗುತ್ತದೆ.

ನಾನು ನನ್ನ ಮತವೇ ಶ್ರೇಷ್ಠವೆಂದು ತಿಳಿದು ಒಳಗೊಳಗೆ ಗರ್ವ ಪಡುತ್ತಿದ್ದ ಪಾಂಡುರಂಗನನ್ನು ಲಿಂಗವೇ ದೂರತಳ್ಳಿ ಆತನ ಗರ್ವ ಇಳಿಯುವಂತೆ ಮಾಡುತ್ತದೆ.

ಕೊನೆಗೆ ಬೀರಲಿಂಗ ಮತ್ತು ಮಾಳಿಂಗರಾಯನ ಹತ್ತಿರ ಕ್ಷಮೆ ಕೇಳಿ ಆ ಲಿಂಗವನ್ನು ಅಲ್ಲಿಯೇ ಸ್ಥಾಪಿಸಿ, ಅದಕ್ಕೆ ಮರುಳುಸಿದ್ಧ ಎಂದು ನಾಮಕರಣ ಮಾಡುತ್ತಾರೆ. ಪಾಂಡುರಂಗ ಬೀರಪ್ಪನ ಶಿಷ್ಯನಾಗಿ ಸುಮಾರು ಹನ್ನೆರಡು ವರ್ಷಗಳವರೆಗೆ ಸೇವೆ ಮಾಡುತ್ತಾನೆ.

ತನ್ನ ಪ್ರತಿಷ್ಠೆಗಾಗಿ ಉಗ್ರತಪಸ್ಸು ಮಾಡಿ ಶಿವನಿಂದ ಲಿಂಗ ಪಡೆದ ರಾವಣನ ಅಹಂಕಾರ ಮಿತಿಮೀರಿದಾಗ ಕೊನೆಗೆ ಗಣಪತಿಯ ಮೂಲಕವೇ ಆ ಲಿಂಗ ಭೂಮಿ ಸೇರುವಂತೆ ಮಾಡುವ ಕಥೆಯನ್ನು ಇದು ನೆನಪಿಸುತ್ತದೆ.

೧೨

ದೈವೀಪುರುಷರ ಮನಸ್ಸು ಹೂವಿನಂತೆ. ಅವರು ಮಾತು ಆಡಿದರೆ ಹೋಯಿತು, ಮುತ್ತು ಒಡೆದರೆ ಹೋಯಿತು ಎನ್ನುವ ಹಾಗೆ ಇವರು ಯಾವ ಕಾರ್ಯ ಮಾಡಿದರೂ ಅಥವಾ ಇನ್ನೊಬ್ಬರಿಗೆ ಹೇಳಿದರೂ ನಿಷ್ಠಾ ಭಾವದಿಂದ ಮಾಡುತ್ತಾರೆ. ತನ್ನ ಕೈಲಾದರೆ ಇವರು ಹೇಳಿದ್ದನ್ನು ಕೇಳಬೇಕು. ಅದರಂತೆ ಆ ಕಾರ್ಯ ಮಾಡಬೇಕು. ಒಂದು ವೇಳೆ ತನ್ನಿಂದ ಆಗುವುದಿಲ್ಲವೆಂದರೆ ನೇರವಾಗಿ ಹೇಳಿಬಿಡಬೇಕು. ಅವರೇನೂ ಮನಸ್ಸಿನಲ್ಲಿ ಬೇಸರ ಮಾಡಿಕೊಂಡು ಶಾಪಕೊಡುವುದಿಲ್ಲ.

ಮಾಳಿಂಗರಾಯ ಹೇಳಿದ ಒಂದು ಕೆಲಸವನ್ನು ಮನಃಪೂರ್ವಕವಾಗಿ ಮಾಡಿಕೊಡದೆ ಅಲಕ್ಷ್ಯ ಮಾಡಿ ಶಿಕ್ಷೆ ಅನುಭವಿಸಿದ ಘಟನೆ ಇದಾಗಿದೆ.

ಮಡೋಳಿಮಲ್ಲಪ್ಪ ಅನ್ನುವ ಒಬ್ಬ ಅಗಸ ಇದ್ದನು. ಮಾಳಿಂಗರಾಯನು ಹಬ್ಬಕ್ಕಾಗಿ ಹೊಲಸಾದ ಮೈಮೇಲಿನ ಬಟ್ಟೆಯನ್ನು ತೊಳೆಯಲು ಕೊಟ್ಟಿರುತ್ತಾನೆ. ಮಲ್ಲಪ್ಪನಿಗೆ ಮನೆಯಲ್ಲಿ ಹೇಳಿದ ಮಾಳಿಂಗರಾಯನ ಮಾತು ನೆನಪಿಗೆ ಬರುತ್ತದೆ. 'ಇವನೇನು ಮಹಾ, ಮಳ್ಳ ಕುರುಬ ಇವನ್ ಮಾತ ನಾವ್ ಕೇಳಬೇಕೆ' ಎಂದು ಒಲ್ಲದ ಮನಸ್ಸಿನಿಂದ ಆ ಎಲ್ಲಾ ಬಟ್ಟೆಗಳನ್ನು ಸುಣ್ಣದ ನೀರಿನಲ್ಲಿ ಅದ್ದಿ,

ಮುಂಜಾನೆ ಹೊತ್ತಿಗೆ ಕತ್ತೆಯ ಮೇಲೆ ಹೇರಿಕೊಂಡು ಹೊಳೆಗೆ ಬರುತ್ತಾನೆ. ಒಂದು ಹಾಸುಗಲ್ಲಿನ ಮೇಲೆ ಒಗೆಯುತ್ತಾನೆ.

ಈ ವಿಷಯ ಮಾಳಿಂಗರಾಯನಿಗೆ ತಿಳಿಯುತ್ತದೆ. ಹೇಳಿದ ಮಾತು ಮಲ್ಲಣ್ಣ ಕೇಳಲಿಲ್ಲವೆಂದು ಮನಸ್ಸಿನೊಳಗೆ ಚಿಂತೆ ಮಾಡುತ್ತಿರುತ್ತಾನೆ. ಅಷ್ಟರಲ್ಲಿ ಗಾಳಿಯ ದೇವರು ಪ್ರತ್ಯಕ್ಷವಾಗುತ್ತದೆ. ಚಿಂತೆಯ ಕಾರಣವೇನು ಎಂದು ಮಾಳಿಂಗರಾಯನನ್ನು ಕೇಳುತ್ತದೆ.

ನನ್ನ ಮಡಿ ಬಟ್ಟೆಯನ್ನು ಕಲ್ಲಿಗೆ ಬಡಿಯದೆ ಅಂತಲೇ ಒಗೆದು ಒಣಗಿಸಬೇಕೆಂದು ಮಲ್ಲಪ್ಪನಿಗೆ ತಿಳಿಸಿದರೂ ಹಾಸುಗಲ್ಲಿನ ಮೇಲೆ ಬಟ್ಟೆ ತೊಳೆಯುವ ವಿಷಯ ತಿಳಿಸುತ್ತಾನೆ. ವಿಚಾರ ತಿಳಿದ ಗಾಳಿದೇವ ಕೋಪಗೊಂಡು ನೇರವಾಗಿ ಹಳ್ಳಕ್ಕೆ ಹೋಗಿ ಹಾಡು ಹೇಳಿಕೊಂಡು ಬಟ್ಟೆ ಒಗೆಯುತ್ತಿದ್ದ ಮಲ್ಲಪ್ಪನಿಗೆ ಸುಂಟರಗಾಳಿಯಾಗಿ ಎತ್ತಿ ನೀರಲ್ಲಿ ಒಗೆಯುತ್ತಾನೆ. ಆಗ ಮಲ್ಲಪ್ಪನ ಬಾಯಿಂದ, ಮೂಗಿನಿಂದ, ಕಿವಿಯಿಂದ ರಕ್ತ ಸೋರುತ್ತದೆ. ಇದನ್ನು ನೋಡಿ ಸುತ್ತ ಮುತ್ತಲಿನ ಜನ ಮಲ್ಲಪ್ಪನಿಗೆ ಹೊತ್ತುಗೊಂಡು ಮನೆಗೆ ತೆಗೆದುಕೊಂಡು ಹೋಗುತ್ತಾರೆ.

ಮಲ್ಲಪ್ಪನಿಗೆ ಏನಾಯಿತು, ಹೇಗಾಯಿತು ಎಂಬ ವಿಷಯ ಯಾರಿಗೂ ಗೊತ್ತಾಗುವುದಿಲ್ಲ. ಮಾಟ ಮಂತ್ರಗಾರರಿಂದ ಹಿಡಿದು, ನಾಡ ವೈದ್ಯರವರಿಗೆ ಎಲ್ಲರಿಗೂ ತೋರಿಸಿದರೂ ಅವನು ಗುಣಮುಖನಾಗುವುದಿಲ್ಲ.

ಮಲ್ಲಪ್ಪನ ಸಂಕಟ ನೋಡದ ಮಾಳಪ್ಪನು ಕೈಲಾಸದಿಂದ ಒಬ್ಬ ಕೊರವಿಯನ್ನು ಕರೆಸಿ ಅವನ ಸಂಕಷ್ಟಕ್ಕೆ ಪರಿಹಾರ ಹೇಳುವಂತೆ ಮಾಡುತ್ತಾನೆ. ಆಕೆ ಗೋಪಾಳ ಬುಟ್ಟಿಯನ್ನು ಹೊತ್ತುಕೊಂಡು ಜಂತಗಿ ಮಠದಲ್ಲಿ ನಿಂತು ಭವಿಷ್ಯ ಹೇಳುತ್ತಿರುತ್ತಾಳೆ. ಅಲ್ಲಿಗೆ ಮಲ್ಲಪ್ಪನು ಹೋಗಿ ಸಂಕಷ್ಟವನ್ನು ಅವಳೆದುರು ಹೇಳಿಕೊಳ್ಳುತ್ತಾನೆ.

ಅಗ ಕೊರವಿ-ಒಬ್ಬ ದೈವೀ ಪುರುಷನ ಮಾತು ಮೀರಿ, ಅವನು ಹೇಳಿದಂತೆ ಕೇಳಿಲ್ಲದ ಕಾರಣ ಹೀಗಾಗಿದೆ. ಹೊಸ ಬಟ್ಟೆ ತಂದು ಮಾಳಿಂಗರಾಯನಿಗೆ ಆಯಾರ ಮಾಡಿದಾಗ ಮಾತ್ರ ನಿನ್ನ ರೋಗ ವಾಸಿಯಾಗುತ್ತದೆ ಎಂದಾಗ, ಮಲ್ಲಪ್ಪ ತಾನು ಮಾಡಿದ ತಪ್ಪಿನ ಅರಿವಾಗಿ ಮಾಳಿಂಗರಾಯನ ಹತ್ತಿರ ಕ್ಷಮೆ ಕೇಳಿ ತಾಯಿ ಮಗ ಹೊಸಬಟ್ಟೆ ತಂದು ಆಯಾರ ಮಾಡುತ್ತಾರೆ.

ಇದೇ ರೀತಿ ಪವಾಡಗಳನ್ನು ಮಾಡುತ್ತ ದೇಶ ಸಂಚಾರ ಮಾಡುತ್ತಿರುತ್ತಾನೆ. ಮಾಳಿಂಗರಾಯ. ಇತ್ತ ಕಣ್ಣವ್ವ ಮಾಳಿಂಗರಾಯನ ಬಗ್ಗೆ ಚಿಂತೆ ಮಾಡುತ್ತ ಇರುತ್ತಾಳೆ. ಹಿರಿಯ ಮಗ ಜಕ್ಕಪ್ಪನು ಸೋದರಮಾವನ ಮಗಳಾದ ಬಾಕಾಬಾಯಿಯನ್ನು ಮದುವೆಯಾಗಿ ಭರಮಲಿಂಗನ ಸೇವೆ ಮಾಡುತ್ತ ಏಣಗಿಯಲ್ಲಿ ಆನಂದದಿಂದ ಕಾಲ ಕಳೆಯುತ್ತಿರುತ್ತಾನೆ. ಹಿರಿಯ ಮಗನ ಮದುವೆಯಾದ ನಂತರ ಕಿರಿಯ ಮಗನ ಮದುವೆ ಸಹ ಮಾಡಬೇಕೆಂಬ ಇಚ್ಛೆ ಅವಳದಾಗಿರುತ್ತದೆ.

ಒಂದು ದಿನ ಬೀರಪ್ಪ ಮಠದೊಳಗೆ ಏಕಾಂತವಾಗಿ ಕುಳಿತಿರುತ್ತಾನೆ. ಆಗ ಕಣ್ಣವ್ವ ಮಗನ ಮದುವೆಯ ವಿಷಯ ತೆಗೆಯುತ್ತಾಳೆ. ಅದಕ್ಕೆ ಬೀರಪ್ಪನು ಸಹ ಒಪ್ಪಿಕೊಂಡು ಮಾಳಿಂಗರಾಯನ ಒಪ್ಪಿಗೆಗಾಗಿ ಕಾಯುತ್ತಿರುತ್ತಾನೆ.

ಆ ದಿನ ಮಾಳಿಂಗರಾಯ ಮಠದಲ್ಲಿ ಪೂಜೆಮಾಡಿ, ಗುರುಸೇವೆ ಎಂದು ಪಾದ ಮುಟ್ಟಲು ಬಂದಾಗ-ಬೀರಪ್ಪನು ತನ್ನ ಶಿಷ್ಯನಿಗೆ ಅತ್ಯಂತ ಪ್ರೀತಿಯಿಂದ 'ನೀನೊಂದು ನನ್ನ ಮಾತು ನಡೆಸಿಕೊಡಬೇಕು' ಎಂದಾಗ ಗುರುಗಳು ಏನು ಹೇಳುತ್ತಾರೆ ಎಂಬ ವಿಷಯ ಈ ತನಗೆ ತಕ್ಷಣ ತಿಳಿದುಬಿಡುತ್ತದೆ. ನೀವು ಹೇಳಿದ್ದಕ್ಕೆ ನನ್ನ ಒಪ್ಪಿಗೆ ಇದೆ ಎಂದು ಗೊಣಗುತ್ತಾನೆ.

ಬೀರಪ್ಪ, ಗ್ರಾಮದ ಹಿರಿಯರೆಲ್ಲ ಸೇರಿ, ಸೋಮರಾಯನನ್ನು ಕರೆದುಕೊಂಡು ತಾಂಬಾಗೌಡನ ಮಗಳಾದ ಲಕ್ಷ್ಮೀಬಾಯಿಯೊಂದಿಗೆ ಮದುವೆ

ಮಾಡುತ್ತಾ ಇವಳು ಬಹಳಷ್ಟು ದಿನ ಬದುಕುವುದಿಲ್ಲ. ತಾಂಬಾದಲ್ಲಿಯೇ ಒಂದು ದಿನ ಐಕ್ಯವಾಗುತ್ತಾಳೆ. ನಂತರ ತುರುಬಿಹಟ್ಟಿಯ ಕೋರಿ ಚಂದ್ರಯ್ಯನ ಮಗಳು ಈರವ್ವ ಶರಣೆಯನ್ನು ಮದುವೆಯಾಗುತ್ತಾನೆ. ಇವಳ ಹೊಟ್ಟೆಯಲ್ಲಿ ಕಿಬ್ಬರಾಯ, ಬೀರಮುತ್ಯಾ, ಕಣ್ಣಮುತ್ಯಾ ಮತ್ತು ಸೋಮರಾಯ ಎಂಬ ನಾಲ್ಕು ಜನ ಮಕ್ಕಳು ಹುಟ್ಟುತ್ತಾರೆ. ಇವರು ದೈವಬಲದಿಂದಲೇ ಜನಿಸಿದವರಾಗಿರುತ್ತಾರೆ. ಪುರಾಣ ಕಥೆಗಳಲ್ಲಿ ಮಕ್ಕಳಾಗದಿದ್ದರೆ ಹರಕೆಗಳನ್ನು ಹೊತ್ತು ದೈವವನ್ನು ಒಲಿಸಿಕೊಂಡು ಸಂತಾನಭಾಗ್ಯ ಪಡೆಯುವಂತೆ, ಇಲ್ಲಿ ಈರವ್ವ ತನ್ನ ಜಡೆಯಿಂದ ಉದುರಿದ ನಾಲ್ಕು ಮಲ್ಲಿಗೆ ಹೂವುಗಳನ್ನು ಸೇವಿಸಿ ಈ ನಾಲ್ಕು ಮಕ್ಕಳನ್ನು ಪಡೆಯುತ್ತಾಳೆ. ದೈವಬಲದಿಂದ ಮಾಳಿಂಗರಾಯನ ವಂಶ ಇಷ್ಟು ದೊಡ್ಡದಾಗಿ ಬೆಳೆದಿದೆ. ಇಡೀ ಹಾಲುಮತ ಸಮುದಾಯ ಇವರನ್ನು ಗುರುಸ್ಥಾನದಲ್ಲಿಟ್ಟು ನೋಡುತ್ತದೆ.

ಮುಂದೆ ಈ ನಾಲ್ಕು ಜನರು ತಂದೆ ಹಾಕಿಕೊಟ್ಟ ಮಾರ್ಗದಲ್ಲಿಯೇ ನಡೆಯುತ್ತಾರೆ. ತಂದೆಯಂತೆ ಪವಾಡಗಳನ್ನು ಮಾಡದಿದ್ದರೂ. ಧರ್ಮವನ್ನು ಪಾಲಿಸುತ್ತಾರೆ. ತಂದೆಯಿಂದ ಗೋರಖವಿದ್ಯೆ ಇವರಿಗೆ ಬಳುವಳಿಯಾಗಿ ಬರುತ್ತದೆ. ಅದನ್ನು ಪ್ರಯೋಗ ಮಾಡದೆ, ಇನ್ನಷ್ಟು ಹೆಚ್ಚಿನ ಸಾಧನೆ ಮಾಡುವ ಪ್ರಯತ್ನ ಮಾಡುತ್ತಾರೆ.

ತಂದೆಯನ್ನು ಕೇಳಿಕೊಂಡು ಬರುವವರಿಗೆ ಕರೆದು ಕೂಡಿಸಿ ಅವರ ಯೋಗ ಕ್ಷೇಮ ವಿಚಾರಿಸಿ ಕೈಲಾದ ಸಹಾಯ ಮಾಡುತ್ತಾರೆ. ತಂದೆ ಇಲ್ಲದ ಸಮಯದಲ್ಲಿ ಕಡುಬಡವರಿಗೆ ಅನ್ನ, ಬಟ್ಟೆಯನ್ನು ಕೊಡುತ್ತಾರೆ. ತಂದೆಯ ತತ್ವ, ಸಿದ್ಧಾಂತ ಹಾಗೂ ಹಾಲುಮತದ ನಿಷ್ಠೆ, ನಿಯಮಗಳನ್ನು ಚಾಚು ತಪ್ಪದೇ ಪಾಲಿಸಿಕೊಂಡು ಬರುತ್ತಾರೆ.

ಇವರು ಸಹ ಮದುವೆಯ ವಯಸ್ಸಿಗೆ ಬಂದಾಗ ನಾಲ್ಕು ಜನರು ಮದುವೆಯನ್ನು ಮಾಳಿಂಗರಾಯ ಭರ್ಜರಿಯಾಗಿ ಮಾಡುತ್ತಾನೆ. ಹಾದಿಗೆ

ಚೆಳಿಕೊಟ್ಟು ಊರಿಗೆ ಊಟಕೊಟ್ಟು ಹಿಂದೆಂದೂ ನಡೆಯದ ಮುಂದೂ ನಡೆಯಲಾರದಷ್ಟು ಅದ್ದೂರಿಯಾಗಿ ನಡೆಸುತ್ತಾನೆ. ಮುಂದೆ ಈ ನಾಲ್ಕು ಜನರಿಂದ ಮುದ್ದುಗೌಡ, ಕೆಂಚಮಾಳಪ್ಪ, ರೂಪಾಜಿ, ಕೆಜೇಣಕಪ್ಪ, ಗೌಡಪ್ಪ, ಕೂರಲೆ ಬೀರಮುತ್ಯಾ, ಬ್ರಹ್ಮಚಾರಿ ಬರಗಾಲ ಸಿದ್ಧ ಆದಿಯಾಗಿ ಏಳು ಜನ ಮೊಮ್ಮಕ್ಕಳು ಹುಟ್ಟುತ್ತಾರೆ.

ಬರಗಾಲ ಸಿದ್ಧನು ಸಹ ಮಾಳಿಂಗರಾಯನಂತೆ ಮಾಟ, ಮಂತ್ರ, ತಂತ್ರಗಳನ್ನು ಕಲಿತು ಪವಾಡಗಳನ್ನು ಮಾಡುತ್ತ ಮುತ್ತ್ಯಾನ ಹೆಸರು ಮಿಂಚುವಂತೆ ಮಾಡುತ್ತಾನೆ. ಮಕ್ಕಳಾಗದವರಿಗೆ ಮಕ್ಕಳನ್ನು ಕೊಡುವುದು, ಈಯದ ಹಸುಗಳಿಗೆ ಕರು ಹಾಕುವಂತೆ ಮಾಡಿ ಸುತ್ತಮುತ್ತಲ ಹಳ್ಳಿಯವರಿಂದ ಸೈ ಎನಿಸಿಕೊಳ್ಳುತ್ತಾನೆ.

ಮಕ್ಕಳಾಗಿ ಮೊಮ್ಮಕ್ಕಳನ್ನು ಕಂಡ ಮಾಳಿಂಗರಾಯನಿಗೆ ಈ ಪವಾಡದ ಹುಚ್ಚು ಹೋಗುವುದಿಲ್ಲ. ತನಗಿಂತ ಬೇರೆ ಯಾರಾದರೂ ಶ್ರೇಷ್ಠರಿದ್ದಾರೆಂದರೆ, ಅವರಿಗಿಂತ ಶ್ರೇಷ್ಠವಾದುದನ್ನು ಮಾಡಿ ಅವರಿಂದಲೇ ಶ್ರೇಷ್ಠತೆಯ ಪಟ್ಟ ಈತ ಪಡೆದುಕೊಳ್ಳುತ್ತಿದ್ದ.

ತನ್ನ ಕುಟುಂಬದಲ್ಲಾಗಲಿ ಅಥವಾ ಸುತ್ತಮುತ್ತಲಿನ ಹತ್ತು ಹಳ್ಳಿಗಳಲ್ಲಿ ಮಾಳಿಂಗರಾಯನ ಹೆಸರೆತ್ತಿ ಹೇಳುವ ಯೋಗ್ಯತೆ ಯಾರಿಗೂ ಇರಲಿಲ್ಲ. ಆದರೆ ಒಂದುಸಲ ಸಾರಂಗಮುನಿಯ ಶಿಷ್ಯ, ಏಕದಂಡಿಗಿ ಪದುಮಣ್ಣನ ಹೆಸರು ಏಕಾಏಕಿ ಕೇಳಿಬರುತ್ತದೆ.

ಈತನೂ ಸಹ ದೈವೀಪುರುಷ. ಹಲವಾರು ವರ್ಷಗಳ ಕಾಲ ಸಾಧನೆ ಮಾಡಿ ಚೌಸಾಟ ವಿದ್ಯೆಗಳನ್ನು ಕರಗತ ಮಾಡಿಕೊಂಡವನು. ಪದುಮಣ್ಣಯೋಗಿ ಸಹ ಪಶುಪಾಲನ ಸಮುದಾಯಕ್ಕೆ ಸೇರಿದವನು. ಮಾಳಿಂಗರಾಯ ಏಳುನೂರು ಗೋವುಗಳನ್ನು ಸಾಕಿದರೆ, ಈತ ಸಾವಿರಾರು ಹಸುಗಳನ್ನು ಸಾಕಿದ್ದನು.

ಪದುಮಣ್ಣಯೋಗಿಯ ವಿಶಿಷ್ಟತೆ ಎಂದರೆ ಆಕಳ ಹಾಲಿನಲ್ಲಿ ಹಿಂಡಿಯನ್ನು ಕಲಿಸಿ, ಸುಮಾರು ಮೂರು ಸಾವಿರ ಕುಳ್ಳುಗಳನ್ನು ತಯಾರಿಸಿ ಜನರಿಗೆ ದಾಸೋಹದ ಅನ್ನ ತಯಾರಿಸಲು ಈ ಕುಳ್ಳುಗಳನ್ನು ದಿನ ನಿತ್ಯ ಉರಿಸುತ್ತಿದ್ದ.

ಈತ ಸಾಮಾನ್ಯನಾಗಿರದೆ ರಾಕ್ಷಸರನ್ನು, ದೆವ್ವಗಳನ್ನು ಕಟ್ಟಿಹಾಕಿ ಸಾಕಿದ ವೀರಪುರುಷ. ಎಲ್ಲಿಗಾದರು ಹೋಗಬೇಕಾದರೆ ನಮ್ಮಂತೆ ನಡೆದು ಹೋಗುತ್ತಿರಲಿಲ್ಲ. ಒಂಟಿ ದೀವಟಿಗೆ ಹಚ್ಚಿಕೊಂಡು, ಒಂದೇ ದಂಡಿಗಿ ಪಲ್ಲಕ್ಕಿಯಲ್ಲಿ ರಾಜನಂತೆ ಕುಳಿತು ಆಕಾಶಮಾರ್ಗವಾಗಿ ಹೋಗುವವನು.

ಒಂದು ದಿನ ಆಕಾಶಮಾರ್ಗವಾಗಿ ಹೋಗುತ್ತಿರಬೇಕಾದರೆ, ಹಳ್ಳಕ್ಕೆ ಬಟ್ಟೆ ಒಗೆಯಲು ಬಂದ ಮಾಳಿಂಗರಾಯನ ಸೊಸೆಯಂದಿರ ಕಣ್ಣಿಗೆ ಬೀಳುತ್ತಾನೆ. ಅವರು ನೋಡಿ ಸುಮ್ಮನೆ ಕೂಡದೆ 'ಪದುಮಣ್ಣ ನಮ್ಮ ಮಾವನಿಗಿಂತ ಹೆಚ್ಚಿನ ಶರಣ' ಎಂದುಬಿಡುತ್ತಾರೆ. ಈ ಮಾತು ಮಾಳಿಂಗರಾಯನ ಕಿವಿಗೆ ಬೀಳುತ್ತದೆ. ಭಯಂಕರವಾದ ಕೋಪ ಬರುತ್ತದೆ. ಇಲ್ಲಿಯವರೆಗೆ ತನಗೆ ಬಿಟ್ಟರೆ ಈ ಶ್ರೇಷ್ಠ ಎಂಬ ಪಟ್ಟ ಮತ್ತೊಬ್ಬರಿಗೆ ಸಿಕ್ಕಿಲ್ಲ. ಇವತ್ತು ಸ್ವತಃ ತನ್ನ ಸೊಸೆಯಂದಿರೇ ಇನ್ನೊಬ್ಬನನ್ನು ಹೊಗಳುವ ವಿಷಯ ತಿಳಿದು ಸಿಡಿಮಿಡಿಗೊಳ್ಳುತ್ತಾನೆ.

ತಕ್ಷಣವೇ ಆಕಾಶಮಾರ್ಗದಲ್ಲಿ ಹೋಗುತ್ತಿದ್ದ ಪದುಮಣ್ಣ ಯೋಗಿಯ ಪಲ್ಲಕ್ಕಿಯನ್ನು ಆಕಾಶದಲ್ಲಿಯೇ ತಡೆಯುತ್ತಾನೆ. ಇದು ಮಾಳಿಂಗರಾಯನ ಕೆಲಸವೆಂದು ಅರಿತು ಆವನ ಹತ್ತಿರ ಹೋಗುತ್ತಾನೆ. 'ಈ ಜಗತ್ತಿನಲ್ಲಿ ಶ್ರೇಷ್ಠ ಎನಿಸಿಕೊಂಡ ಶರಣ ಇದ್ದರೆ ಅದು ನೀನೇ. ನಿನ್ನ ಸೊಸೆಯಂದಿರು ಏನೋ ತಿಳಿಯದೆ ಹೇಳಿದ್ದಾರೆ. ಅವರನ್ನು ಕ್ಷಮಿಸು' ಎಂದು ಹೇಳಿ ಅವನಿಂದ ಮೋಕ್ಷದ ಮಾರ್ಗಗಳನ್ನು ತಿಳಿದುಕೊಳ್ಳುತ್ತಾನೆ.

ಚೌಸಾಟವಿದ್ಯೆ ಬಲ್ಲ ಮಾಳಿಂಗರಾಯನಿಗೆ ಕ್ವಾಣೂರಿನ ಮಠದಲ್ಲಿದ್ದ ದೇಗೊಂಡಗೌಡ ಮೋಡಿಕಾರ ಆಟ ಆಡಲು ಆಹ್ವಾನ ನೀಡುತ್ತಾನೆ. ಇದು

ಮಾಳಿಂಗರಾಯನಿಗೆ ಬಹಳಷ್ಟು ಖುಷಿ ಕೊಡುತ್ತದೆ. ಕೈಯಲ್ಲಿ ಭಂಡಾರ ಹಿಡಿದು ಇಪ್ಪತ್ನಾಲ್ಕು ಸಾವಿರ ಜನ ಶಿಷ್ಯಂದಿರನ್ನು ಕರೆದುಕೊಂಡು ಸ್ಪರ್ಧೆಗೆ ಹೋಗುತ್ತಾನೆ. ಮಾರ್ಗ ಮಧ್ಯದಲ್ಲಿ ಹೊಳೆ ಬರುತ್ತದೆ. ಕಂಬಳಿ ಹಾಸಿ, ಕಂಬಳಿ ಮೇಲೆ ಇಪ್ಪತ್ನಾಲ್ಕು ಸಾವಿರ ಜನ ಶಿಷ್ಯಂದಿರನ್ನು ಮೇಲೆ ನಡೆದಾಡಿಸುವ ಮೂಲಕ ಹೊಳೆ ದಾಟುತ್ತಾರೆ. ಈ ಪವಾಡ ಸುತ್ತ ಮುತ್ತಲಿನ ಜನ ಬೆರಗಾಗಿ ನಿಂತು ನೋಡುತ್ತಾರೆ.

ಕ್ವಾಣೂರುಮಠದ ದೇಗೊಂಡಗೌಡನು ಸಹ ಮೋಡಿಕಾರ ಆಟದಲ್ಲಿ ಪ್ರವೀಣನಾಗಿದ್ದ. ಬಂಗಾಲದೇಶದ ಮೋಡಿಕಾರರಿಂದ ಮೋಡಿ, ಮಾಟ ಆಟದಲ್ಲಿ ಹೆಚ್ಚಿನ ವಿದ್ಯೆ ಪಡೆದಿದ್ದ. ಮಾಳಿಂಗರಾಯನು ಸಹ ಆತನಿಗೆ ಮೀರಿಸುವಂಥವನಾಗಿದ್ದ.

ಕ್ವಾಣೂರುಮಠದೊಳಗೆ ಬರುತ್ತಲೇ ಏಳು ಬಂಡಿಗಳನ್ನು ಕ್ಷಣಾರ್ಧದಲ್ಲಿ ತುಂಡು ಮಾಡಿದ ಮಾಳಿಂಗರಾಯ. ಹೀಗೆ ಒಂದೊಂದು ವಿದ್ಯೆಗಳನ್ನು ಕೈಚಳಕದ ಮೂಲಕ ತೋರಿಸಿ ಎದುರಾಳಿಗಳಿಗೆ ದಂಗುಬಡಿಸಿದ್ದ. ಯಾರಿಗೂ ಅವಕಾಶ ಕೊಡದೆ ಎಲ್ಲರನ್ನು ಸೋಲಿಸಿದನು. ಇದರಿಂದ ಮಾಳಿಂಗರಾಯನ ಪ್ರಸಿದ್ಧಿ ಮತ್ತಷ್ಟು ಹೆಚ್ಚಿತು.

೧೪

ಹುಲಜಂತಿ ಗ್ರಾಮವನ್ನು ಬಿಟ್ಟು ದೂರದ ಹಳ್ಳಿಯೊಂದಕ್ಕೆ ಮಾಳಿಂಗರಾಯ ಹೋಗಬೇಕಾಗಿ ಬರುತ್ತದೆ. ರೆಬರಾಯ, ಬೀರಮುತ್ಯಾ, ಕಣಮುತ್ಯಾ, ಸ್ವಾಮರಾಯ ನಾಲ್ಕುಜನ ಮಕ್ಕಳು, ಏಳು ಜನ ಗೆಳೆಯರು ಹಾಗೂ ಏಳ್ನೂರು ಜನ ಕಾಲಾಳುಗಳೊಂದಿಗೆ ಹವಳದ ಮುತ್ತಿನ ಪಲ್ಲಕ್ಕಿಯಲ್ಲಿ ಕುಳಿತು ಪ್ರಯಾಣ ಬೆಳೆಸುತ್ತಾರೆ. ಪಲ್ಲಕ್ಕಿ ಹೊತ್ತ ಆಳುಜನರ ಜಯಕಾರ, ವಾಲಗದವರ ನಾದದ ಮಧ್ಯೆ ಮಾಳಿಂಗರಾಯ ಕಂಗೊಳಿಸುತ್ತಾನೆ. ಹೀಗೆ ಹುಲಜಂತಿ ತೊರೆದು ಮುಂದೆ ಅಲ್ಲಲ್ಲಿ ನೆಲೆನಿಂತು ಮುಂದಿನೂರಿಗೆ ಪ್ರಯಾಣಿಸುತ್ತಾರೆ.

ದಾರಿ ಮಧ್ಯದಲ್ಲಿ ಕಳ್ಳರು ಎದುರುಗೊಳ್ಳುತ್ತಾರೆ. ಅವರೆಲ್ಲ ಹಗಲು ಹೊತ್ತಿನಲ್ಲಿಯೇ ಕಳ್ಳತನ ಮಾಡುತ್ತಿರುತ್ತಾರೆ. ಮಾಳಿಂಗರಾಯ ಬರುತ್ತಲೇ ಅವರ ಮೇಲೆ ಸಿಂದಿಯಬನದ ಮರೆಯಲ್ಲಿ ನಿಂತು ಬಾಣ ಬಿಡುತ್ತಾರೆ. ಕಳ್ಳರ ಬಾಣ ಇವರ ದಂಡಿನ ಮೇಲೆ ಬೀಳುವುದೇ ಇಲ್ಲ. ಮುಂಚೆಯೇ ತನ್ನಲ್ಲಿರುವ ಮಾಯದ ಭಂಡಾರವನ್ನು ಕಳ್ಳರ ಕಡೆಗೆ ತೂರಿರುತ್ತಾನೆ. ಹೀಗಾಗಿ ಕಳ್ಳರು ಬಿಟ್ಟ ಬಾಣಗಳು ಮಾಯವಾಗುವಂತೆ ಮಾಡಿರುತ್ತಾನೆ.

ಮಾಳಿಂಗರಾಯನ ಮೇಲೆ ಬಾಣ ಬಿಟ್ಟ ತಪ್ಪಿನಿಂದಾಗಿ ಕಳ್ಳರ ಕಣ್ಣು ಹೋಗುತ್ತವೆ. ಕುರುಡರಾಗಿ ಒದ್ದಾಡುವಾಗ ತಾವು ಮಾಡಿದ ತಪ್ಪಿನ ಅರಿವಾಗುತ್ತದೆ. ಕೊನೆಗೆ ಮಾಳಿಂಗರಾಯನ ಹತ್ತಿರ ಬಂದು, ಅವನ ಕಾಲು ಹಿಡಿದು ಸಿದ್ಧರಲ್ಲಿ ನೀವು ಹೆಚ್ಚಿನ ಸಿದ್ಧ, ದೇವರಲ್ಲಿ ನೀವು ಹೆಚ್ಚಿನ ದೇವರು. ನಾವು ಮಾಡಿದ ತಪ್ಪು ನಮಗೆ ಅರಿವಾಗಿದೆ. ನಮಗೆ ಮರಳಿ ಕಣ್ಣು ಕೊಡಬೇಕು. ನಾವು ಸಹ ನಿಮ್ಮ ದಂಡಿನಲ್ಲಿ ಬರುತ್ತೇವೆ ಎಂದು ಪರಿಪರಿಯಾಗಿ ಬೇಡಿಕೊಂಡಾಗ ಅವರ ಮೇಲೆ ಭಂಡಾರ ಚೆಲ್ಲಿ ಮತ್ತೆ ಕಣ್ಣು ಬರುವಂತೆ ಮಾಡುತ್ತಾನೆ. ಹಿರವಳ್ಳಿ ದಂಡೆಯ ಮೇಲೆ ಬಂದು ಕಳ್ಳರು ಮಾಳಿಂಗರಾಯನ ಪಾದ ಹಿಡಿದು ಇನ್ನು ಮುಂದೆ ಇಂಥ ಕೆಟ್ಟ ಕೆಲಸ ಮಾಡುವುದಿಲ್ಲವೆಂದು ಪ್ರಮಾಣ ಮಾಡುತ್ತಾರೆ. ಒಳ್ಳೆಯ ದಾಗಲಿ ಎಂದು ಮಾಳಿಂಗರಾಯ ಆಶೀರ್ವದಿಸುತ್ತಾನೆ.

ಮಾಳಿಂಗರಾಯ ಕ್ವಾಣೂರುಮಠದ ಜಾತ್ರೆಗಾಗಿ ಹೋಗುತ್ತಿರುತ್ತಾನೆ. ಮರಬಿಕ್ಕಿ ಎಂಬ ಊರು ಪ್ರವೇಶ ಮಾಡುವಾಗ ಒಬ್ಬ ಹೆಣ್ಣುಮಗಳ ಧ್ವನಿ ಹಿಂದಿನಿಂದ ಕರೆದಂತೆ ಕೇಳಿಸುತ್ತದೆ. ಹಿಂದೆ ತಿರುಗಿ ನೋಡಿದರೆ ಒಕ್ಕಲಿಗರ ಹೆಣ್ಣು ಮಗಳು. ಓಡಿಬಂದು ಕಾಲಿಗೆ ನೀರು ಹಾಕಿ ಆಶೀರ್ವಾದ ಪಡೆದು, ತಂದೆ ನಮ್ಮ ಮನೆಗೆ ಬಂದು ಹೋಗಬೇಕು, ಎಂದು ಆಹ್ವಾನ ನೀಡಿದಾಗ, ಪರೀಕ್ಷಿಸುವಂತೆ-ನಮ್ಮ ದಂಡು ಬಹಳಷ್ಟಿದೆ. ಮನೆಯಲ್ಲಿ ಕೂಡಲು ಜಾಗ

ಸಾಕಾಗುವುದಿಲ್ಲ ಎಂದು ಮಾಳಿಂಗರಾಯ ಹೇಳುತ್ತಾನೆ. ಹಾಗಾದರೆ ಅಡಿಗೆ ಮಾಡಿಕೊಂಡು ಇಲ್ಲಿಗೆ ತರುತ್ತೇನೆ ಎಂದು ಹೇಳಿ, ಪಟ್ಟಂತ ಹೋಗಿ ಅಡಿಗೆ ಮಾಡಿಕೊಂಡು ತಂದು ಮಾಳಿಂಗರಾಯನಿಗೆ ಊಟ ಬಡಿಸುತ್ತಾಳೆ.

ಮಾಳಿಂಗರಾಯ ಊಟ ಮಾಡುತ್ತಲೇ ನಿನ್ನ ಮಗನಿಗೂ ಊಟಕ್ಕೆ ಇಲ್ಲಿಗೆ ಕರೆಸು ಎಂದು ಸೂಚಿಸುತ್ತಾನೆ. ತೊಟ್ಟಿಲಿನಲ್ಲಿರುವ ಸಣ್ಣ ಮಗು ಇಲ್ಲಿಗೆ ಹೇಗೆ ಬರುತ್ತಾನೆ ಎಂದು ಯಮುನವ್ವ ಕೇಳುತ್ತಾಳೆ. ಇಷ್ಟು ಮಾತಕೇಳಿ ಮೂರು ಕಣ್ಣಿನ ಹುತ್ತಿನ ಹತ್ತಿರ ನಿಂತು ನಿನ್ನ ಮಗನ ಹೆಸರಿನಿಂದ ಕೂಗು ಬರುತ್ತಾನೆ ಎಂದು ಮಾಳಪ್ಪ ಹೇಳಿದಂತೆ ಕೂಗಿದಾಗ ಅದೇ ಹುತ್ತಿನಿಂದಲೇ ಆಕೆಯ ಮಗ ಹೊರಬರುತ್ತಾನೆ. ಮಗುವಿನ ಬಾಯಿಗೆ ಮೂರು ತುತ್ತು ಅನ್ನ ಹಾಕಿ ಅಲ್ಲಿಂದ ಮಾಳಿಂಗರಾಯನ ದಂಡು ಮುಂದೆ ಸಾಗುತ್ತದೆ. ಇದನ್ನು ಕಂಡು ಯಮುನಾಬಾಯಿ ಬಾಯಿ ಮೇಲೆ ಬೆಟ್ಟಿಟ್ಟು 'ಎಲ್ಲಾ ಭಗವಂತನ ಲೀಲಾ ಧನ್ಯ ಧನ್ಯ' ಎಂದು ನುಡಿಯುತ್ತಾಳೆ.

ಮಾಳಿಂಗರಾಯ ಊರುರೂ ತಿರುಗುತ್ತ ಹಲವಾರು ಪವಾಡಗಳನ್ನು ಮಾಡುತ್ತ ಕೊನೆಗೆ ಹುಲಜಂತಿ ಎಂಬ ಊರಿನಿಂದ ಮೂರು ಮೈಲು ದೂರದಲ್ಲಿರುವ ಬೊಬ್ಬಲಿವನದಲ್ಲಿ ದೊಡ್ಡಿ ನಿರ್ಮಿಸಿಕೊಂಡು ಕಾಲ ಕಳೆಯುತ್ತಾನೆ. ಮಾಳಪ್ಪನ ಗುರು ಬೀರಪ್ಪನು ಸಮೀಪದಲ್ಲಿಯೇ ಇರುವ ಹನ್ನೂರಿನಲ್ಲಿ ಐಕ್ಯವಾದ ವಿಷಯ ತಿಳಿದು ಈತನು-ಶ್ರಾವಣಮಾಸದ ಆದಿತ್ಯವಾರದ ಅಮವಾಸ್ಯೆಯಂದು ತನ್ನ ಬಂಧು, ಬಳಗದ ಜೊತೆಗೆ ಅಣ್ಣ ಜಕ್ಕಪ್ಪನನ್ನು ಬರಹೇಳಿ, ಮಕ್ಕಳಿಗೂ ತನ್ನ ಐಕ್ಯದ ವಿಷಯ ತಿಳಿಸಿ, ದುಃಖಪಡದಂತೆ ಹೇಳಿ ಅಂದು ಮಧ್ಯರಾತ್ರಿ ಮಾಳಿಂಗರಾಯ ಜೀವಂತ ಸಮಾಧಿಯಾಗುತ್ತಾನೆ. ತಮ್ಮನ ಮರಣದ ನಂತರ ಅಣ್ಣ ಜಕ್ಕಪ್ಪನು ಏಣಗಿ ಮಠದಲ್ಲಿ ಜೀವಂತ ಸಮಾಧಿಯಾಗುತ್ತಾನೆ.

ಮಾಳಿಂಗರಾಯನು ಮರಣದ ನಂತರವೂ ಅನೇಕ ಪವಾಡಗಳನ್ನು ಮಾಡಿದ್ದಾನೆ ಎಂದು ಜನರು ನಂಬುತ್ತಾರೆ. ಅವನು ಐಕ್ಯವಾದ ಸ್ಥಳಕ್ಕೆ ಒಂದು ಶಕ್ತಿ ಇದೆ ಎಂದು ಭಾವಿಸುತ್ತಾರೆ. ಇವನನ್ನು ಕುರಿತು ಹಲವಾರು ಐತಿಹ್ಯಗಳು ಚಾಲ್ತಿಯಲ್ಲಿವೆ. ಭಾವುಕ ಭಕ್ತರಿಂದ ಗುಡಿ ಗುಂಡಾರಗಳ ನಿರ್ಮಾಣವಾಗಿ, ಇವುಗಳನ್ನೇ ಆಧಾರವಾಗಿಟ್ಟುಕೊಂಡು ಕಾವ್ಯ ಕಟ್ಟುವಲ್ಲಿ ಒಂದಷ್ಟು ಭಾವುಕತೆ ಅತಿ ರಂಜನೆಯ ಪದ್ಧತಿ ಜನಪದರಲ್ಲಿದೆ. ಭೌತಿಕ ವಸ್ತುಗಳ ಕುರಿತು ವಾದವಿವಾದ ಏನೇ ಇದ್ದರೂ, ಒಂದು ಸಾಮಾನ್ಯ ಕುಟುಂಬದಲ್ಲಿ ಹುಟ್ಟಿ ಕೈಚಳಕದಂಥ ಮೋಡಿಯಾಟಗಳನ್ನು ಕರಗತ ಮಾಡಿಕೊಂಡು ಕೈಲಾಸದ ದೇವಾನುದೇವತೆಗಳನ್ನು, ಮತಧರ್ಮದ ಮದ ಇರುವವರನ್ನು, ಜನಸಾಮಾನ್ಯರ ಮೇಲೆ ದಬ್ಬಾಳಿಕೆ ಮಾಡುವ ಶ್ರೀಮಂತರನ್ನು ತಿದ್ದಿ ದಾರಿಗೆ ತರುವಂತೆ ಮಾಡಿದ್ದು ಮಾಳಿಂಗರಾಯನ ದೊಡ್ಡ ಪವಾಡವೇ ಸರಿ.

* * * * *




Shot on Y12
Vivo AI camera